ಬೆಲೆ ರೂ.2.50
D.O.P - 15th of every month at Udupi Sorting Office

ತಂತ್ರಾಡಿ ವಿಶ್ವನಾಥ ಶಾನುಭೋಗ್ 94487 24161 97417 85551

ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೋ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-18 ಸಂಚಿಕೆ-7 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಕಳೆದ ಮೂರು ವರ್ಷಗಳ ಸಿಂಹಾವಲೋಕನ



ತಾ.21-06-2015ರಂದು ಜರಗಿದ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು ಇದರ ವಾರ್ಷಿಕ ಮಹಾಸಭೆಯಲ್ಲಿ 27 ಜನ ನಿರ್ದೇಶಕರುಳ್ಳ ಪ್ರಸಕ್ತ ಆಡಳಿತ ಮಂಡಳಿಯು ಸರ್ವಾನುಮತದಿಂದ ಆಯ್ಕೆಯಾಗಿತ್ತು. ಆಡಳಿತಮಂಡಳಿಯ ಪ್ರಥಮ ಸಭೆಯಲ್ಲಿ ಶ್ರೀ ವೈ. ಭುವನೇಂದ್ರ ರಾಯರು ಅಧ್ಯಕ್ಷರಾಗಿಯೂ, ಶ್ರೀ ಕೆ. ಸುರೇಶರಾಯರು ಕಾರ್ಯದರ್ಶಿಗಳಾಗಿಯೂ ಹಾಗೂ ಶ್ರೀ ಕೆ.ಸುಧಾಕರ ರಾಯರು ಕೋಶಾಧಿಕಾರಿಗಳಾಗಿಯೂ ಆಯ್ಕೆಯಾಗಿದ್ದರು. ಈ ನೂತನ ಆಡಳಿತ ಮಂಡಳಿಯು ಅಂದಿನಿಂದ ಇಂದಿನವರೆಗೆ ತನ್ನ ಮೂರು ವರ್ಷಗಳ ಕಾರ್ಯಾವಧಿಯಲ್ಲಿ ನಡೆಸಿದ ವಿಶೇಷ ಕೆಲಸಕಾರ್ಯಗಳ ಸಿಂಹಾವಲೋಕನ ವಿದು.

ಮೊತ್ತಮೊದಲಾಗಿ ಸಂಘದ ಚಟುವಟಿಕೆಗಳು ಚುರುಕಾಗಿ ಹಾಗೂ ದಕ್ಷತೆಯಿಂದ ನಡೆಯುವಂತಾಗಲು ಸಂಘವು ಈಗಾಗಲೆ ನಡೆಸುತ್ತಿರುವ ಕಾರ್ಯಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಹಲವಾರು ವೇದಿಕೆಗಳನ್ನು ಪುನರ್‌ರಚಿಸಲಾಯಿತು. ದೇವಸ್ಥಾನದ ಚಟುವಟಿಕೆಗಳಿಗೆ ದೇವಸ್ಥಾನ ವೇದಿಕೆ, ಪತ್ರಿಕೆಗೆ ಶ್ರೀ ಶಾರದಾ ವೇದಿಕೆ, ಯುವ ಹಾಗೂ ಕ್ರೀಡಾ ವೇದಿಕೆ, ಮಹಿಳಾ ವೇದಿಕೆ, ವಿದ್ಯಾರ್ಥಿ ವೇತನ-ಶಿಕ್ಷಣ ಮತ್ತು ತರಬೇತಿ ವೇದಿಕೆ, ವೈದ್ಯಕೀಯ ವೇದಿಕೆ, ಕಲೆ ಹಾಗೂ ಸಾಂಸ್ಕೃತಿಕ ವೇದಿಕೆ ಮತ್ತು ಆಂತರಿಕ ಲೆಕ್ಕಪರಿಶೋಧನಾ ವೇದಿಕೆ ಹೀಗೆ ಎಂಟು ವೇದಿಕೆಗಳನ್ನು ರಚಿಸಿ ಆಯಾ ರಂಗದಲ್ಲಿ ಪಳಗಿರುವ ನಮ್ಮವರನ್ನು ಈ ವೇದಿಕೆಗಳ ಚಟುವಟಿಕೆಗಳಲ್ಲಿ ಭಾಗಿಗಳಾಗುವಂತೆ ಮಾಡಲಾಯಿತು ಹಾಗೂ ಕಾರ್ಯಕರ್ತರ ಬಳಗವನ್ನು ವಿಸ್ತರಿಸಲಾಯಿತು.

ಶ್ರೀ ಶೃಂಗೇರಿ ಶಾರದಾ ಪೀಠದೊಂದಿಗಿನ ನಮ್ಮ ಸಮಾಜವು ಹೊಂದಿರುವ ಸಂಬಂಧದ ಐತಿಹಾಸಿಕ ಮಹತ್ವವನ್ನು ಅರಿತು ಈ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುವ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಯಿತು. ಶ್ರೀ ಶೃಂಗೇರಿ ಜಗದ್ಗುರುಗಳನ್ನು ಕಳೆದ ಮೂರು ವರ್ಷಗಳಲ್ಲಿ ನಮ್ಮ ಸಂಘದ ವತಿಯಿಂದ ಎಂಟು ಬಾರಿ ಭೇಟಿಯಿತ್ತು ಆಶೀರ್ವಾದ ಪಡೆಯಲಾಗಿದೆ. ಗುರುಗಳು ಉಡುಪಿ ಹಾಗೂ ದ.ಕ ಜಿಲ್ಲೆಗೆ ಭೇಟಿಯಿತ್ತಾಗಲೆಲ್ಲಾ ಹಾಗೂ ಚಾತುರ್ಮಾಸ್ಯದ ಸಂದರ್ಭದಲ್ಲಿ ಸಮಾಜ ಬಾಂಧವರನ್ನು ಸಂಘಟಿಸಿ ಅವರ ಬಳಿ ಕರೆದೊಯ್ದು ಗುರುಗಳ ಆಶೀರ್ವಾದವನ್ನು ಪಡೆದಿದ್ದೇವೆ. ಶ್ರೀ ಶೃಂಗೇರಿ ಮಠದ ಬಗ್ಗೆ, ಶ್ರೀ ಶ್ರೀಗಳ ಬಗ್ಗೆ ಹಾಗೂ ಶ್ರೀ ಶಂಕರಾಚಾರ್ಯರ ಬಗ್ಗೆ ಆಗಾಗ ಲೇಖನಗಳನ್ನು ಪ್ರಕಟಿಸುವುದರ ಮೂಲಕ ನಮ್ಮ ಸಮಾಜ ಬಾಂಧವರಿಗೆ ಅಗತ್ಯ ಮಾಹಿತಿ ಒದಗಿಸಲಾಗಿದೆ. ಶೃಂಗೇರಿ ಪೀಠಕ್ಕೆ ನೀಡಿದ ಪ್ರಾಮುಖ್ಯತೆಯಿಂದ ಹಾಗೂ ನಮ್ಮ ಸಮಾಜಬಾಂಧವರು ಮಠಕ್ಕೆ ತೋರಿಸುತ್ತಿರುವ ನಿಷ್ಠೆಯಿಂದ ಗುರುಗಳೂ ಸಂತುಷ್ಟರಾಗಿದ್ದು ಇದೇ ವರ್ಷ ಶ್ರೀ ಶಾರದಾ ದೇವಸ್ಥಾನದಲ್ಲಿ ನಡೆಯಲಿರುವ ಬ್ರಹ್ಮಕಲಶೋತ್ಸವಕ್ಕೆ ಆಗಮಿಸುವುದಾಗಿಯೂ ಹೇಳಿ ಆಶೀರ್ವದಿಸಿದ್ದಾರೆ. ಹೆಬ್ಬೂರಿನ ಕೋದಂಡಾಶ್ರಮ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಜಿಗಳ ಸನ್ನಿಧಾನಕ್ಕೂ ಎರಡು ಬಾರಿ ತೆರಳಿ ಆಶೀರ್ವಾದ ಪಡೆದಿದ್ದೇವೆ.

ಕಳೆದ ಮೂರು ವರ್ಷಗಳಲ್ಲಿ ಸಮಾಜ ಬಾಂಧವರನ್ನು ಸಂಘಟಿಸುವ ಕೆಲಸಕ್ಕೆ ಕೈಹಾಕಿದ್ದು ಇನ್ನೊಂದು ಪ್ರಮುಖ ಹೆಜ್ಜೆ. ಸಮಾಜ ಬಾಂಧವರನ್ನು ಸಂಘಟಿಸಲು ನಮಗೆ

(3ನೇ ಪುಟಕ್ಕೆ...)

## ಶ್ರೀ ಎಚ್. ನರಸಿಂಹ ಮೂರ್ತಿಗಳಿಗೆ ಶ್ರದ್ಧಾಂಜಲಿ



ತಾ.17-06-2018ರಂದು ನಿಧನರಾದ ಕುಂದಾಪುರ ತಾಲೂಕಿಗೆ ನಿಯೋಜಿತ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳಾದ ಮತ್ತು ಶ್ರೀ ಶಂಕರ ತತ್ವಾನುಷ್ಠಾನ ಸಮಿತಿಯ ಜಿಲ್ಲಾ ಸಂಚಾಲಕರಾದ ಡಾ। ಎಚ್.ವಿ. ನರಸಿಂಹಮೂರ್ತಿಗಳಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಶ್ರೀಯುತರ ಗುಣಗಾನ ಮಾಡಿ, ಸಂಘ ಹಾಗೂ ಸ್ಥಾನಿಕ ಸಮಾಜದೊಂದಿಗಿನ ಅವರ ಸಂಬಂಧವನ್ನು ಸ್ಮರಿಸಿಕೊಳ್ಳಲಾಯಿತು. ಶ್ರೀ ಶಾರದಾ ಪತ್ರಿಕೆಗೆ ಕಳೆದ ತಿಂಗಳ ತನಕವೂ ಅವರು ಲೇಖನಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದುದನ್ನು ಸ್ಮರಿಸಲಾಯಿತು.

ಚಿಕ್ಕಮಗಳೂರು ಜಿಲ್ಲೆಯ ತೋಟದೂರು ಗ್ರಾಮದ ಮಾವಿನಕುಡಿಗೆಯಲ್ಲಿ ಜನಿಸಿದ್ದ ಇವರು ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಸೇರಿಕೊಂಡ ಬಳಿಕ ಕುಂದಾಪುರದಲ್ಲೇ ನೆಲೆಸಿದ್ದರು.

ಶೃಂಗೇರಿ ಶಾರದಾ ಪೀಠದ ಈ ಭಾಗದ ಧರ್ಮಾಧಿಕಾರಿಯಾಗಿದ್ದ ಅವರು, ಕನ್ನಡ ಸಾಹಿತ್ಯ ಪರಿಷತ್, ಜೇಸಿಸ್ ಅಧ್ಯಕ್ಷರಾಗಿ, ಎನ್ನೆಸ್ಸೆಸ್ ಯೋಜನಾಧಿಕಾರಿ, ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಜಿಲ್ಲಾ ಕಾರ್ಯದರ್ಶಿಯಾಗಿ ರಾಜ್ಯಾಧ್ಯಕ್ಷರಾಗಿ, ರೋಟರಿ ಸದಸ್ಯರಾಗಿ ಹಾಗೂ ಕುಂದಾಪುರ ಭಾಗದ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದರು.

620ಕ್ಕೂ ಹೆಚ್ಚು ಲೇಖನ, 70ಕ್ಕೂ ಅಧಿಕ ಕೃತಿ, 15ಕ್ಕೂ ಹೆಚ್ಚಿನ ಪಠ್ಯಪುಸ್ತಕ ರಚಿಸಿದ್ದಾರೆ. ಅವರ 'ಕನ್ನಡ-ಕರ್ನಾಟಕ ರಸಪ್ರಶ್ನೆಗಳು' ಕೊನೆಯ ಕೃತಿಯಾಗಿದ್ದು, ಈ ವರ್ಷ ಕಂಬದಕೋಣೆಯಲ್ಲಿ ಜರಗಿದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಿತ್ತು. ಅವರ 'ಉಪನಯನ' ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಲಭಿಸಿತ್ತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576102.

### ಪ್ರಕಟಣೆ

ಆತ್ಮೀಯ ಸಮಾಜ ಬಾಂಧವರೇ,

ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ಸ್ವಚ್ಛತಾ ಅಭಿಯಾನ

ತಾ.05-08-2018ನೇ ಆದಿತ್ಯವಾರ ಬೆಳಿಗ್ಗೆ 10-00ರಿಂದ ಶ್ರೀಶಾರದಾ ಮಂಟಪ, ಶ್ರೀಶಾರದಾ ದೇವಸ್ಥಾನ, ಶ್ರೀ ಜ್ಞಾನ ಮಂದಿರ, ನಾಗಬನ ಮತ್ತು ಪರಿಸರದಲ್ಲಿ ಯುವ ವೇದಿಕೆಯ ಸದಸ್ಯರು ಹಾಗೂ ಸಮಾಜ ಬಾಂಧವರಿಂದ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಕೈಜೋಡಿಸಬೇಕಾಗಿ ವಿನಂತಿ.

ಕೃಷ್ಣಾನಂದ ಉಂಡಾರು, ಅಧ್ಯಕ್ಷರು — ಯುವ ಮತ್ತು ಕ್ರೀಡಾ ವೇದಿಕೆ — ವಸಂತ ರಾವ್ ಕರಂಬಳ್ಳಿ, ಸಂಚಾಲಕರು

### ನಾಗರಪಂಚಮಿ

ತಾ.15-08-2018ನೇ ಬುಧವಾರ
ಸಮಯ : ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00ರ ತನಕ

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.10-08-2018ನೇ ಶುಕ್ರವಾರ
ಸಮಯ : ಸಂಜೆ 5-00 ಗಂಟೆಗೆ

### ವರಮಹಾಲಕ್ಷ್ಮೀ ವ್ರತ

ತಾ.24-08-2018ನೇ ಶುಕ್ರವಾರ
ಸಂಜೆ 5-00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

### ಋಗುಪಾಕರ್ಮ

ತಾ.25-08-2018ನೇ ಶನಿವಾರ
ಸಮಯ : ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

### ಶೃಂಗೇರಿಯಲ್ಲಿ ಗುರುಗಳ ಭೇಟಿ

ತಾ.09-09-2018ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7-00 ಗಂಟೆಗೆ ಶ್ರೀಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಮೆನೇಜರ್(9448108920, 0820-2520754) ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ಅಂದಾಜು ಖರ್ಚು ರೂ.350/-

ಶ್ರೀ ಕೆ. ಸುರೇಶ್ ರಾವ್, ಕಾರ್ಯದರ್ಶಿ — ಶ್ರೀ ಕೆ. ಸುಧಾಕರ ರಾವ್, ಕೋಶಾಧಿಕಾರಿ — ಶ್ರೀ ವೈ. ಭುವನೇಂದ್ರ ರಾವ್, ಅಧ್ಯಕ್ಷರು

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಕಳೆದ ವರ್ಷ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸುವರ್ಣ ಮಹೋತ್ಸವವನ್ನು ಆಚರಿಸಲಾದ ಸಂದರ್ಭದಲ್ಲಿ ಸಾಧಾರಣ ಮಟ್ಟಿಗೆ ಉಡುಪಿ ನಗರದ ನಮ್ಮವರ ಎಲ್ಲಾ ಮನೆಗಳನ್ನು ಸಂಪರ್ಕಿಸಲಾಗಿತ್ತು. ಹಾಗೆಯೇ ಉಡುಪಿ ತಾಲೂಕಿನ ಪ್ರತೀ ವಿಳಾಸಕ್ಕೂ, ಸಂಘದ ಎಲ್ಲಾ ಸದಸ್ಯರಿಗೂ ಸುವರ್ಣ ಮಹೋತ್ಸವದ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿತ್ತು. ಆಗ ಭೇಟಿಯಾದ ಪ್ರತಿಯೊಬ್ಬ ಸಮಾಜ ಬಾಂಧವನೂ ಸಂಘದ ಬಗ್ಗೆ ಅಭಿಮಾನವನ್ನೂ, ಹಾಗೂ ಅದರ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿರುವುದನ್ನು ಗಮನಿಸಿದೆವು. ಅದೇ ರೀತಿ ನಮ್ಮ ತಾಲೂಕಿನಲ್ಲಿಯೇ ವಿವಿಧ ರಂಗಗಳಲ್ಲಿ ಪರಿಣತಿ ಹೊಂದಿದ ಸಂಪನ್ಮೂಲ ವ್ಯಕ್ತಿಗಳು ಬಹಳ ಸಂಖ್ಯೆಯಲ್ಲಿ ಇರುವುದನ್ನು ಗಮನಿಸಿದೆವು. ಆದರೂ ಸಂಘದ ದಿನನಿತ್ಯದ ಚಟುವಟಿಕೆಗಳಲ್ಲಿ ಭಾಗವಹಿಸುವವರ ಸಂಖ್ಯೆ ಬೆರಳೆಣಿಕೆಯಲ್ಲಿದೆ. ಸಂಘದ ಬಗ್ಗೆ ಆಸಕ್ತಿ ಇರುವವರನ್ನು ಅದರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದೇ ನಮ್ಮ ಮುಂದಿರುವ ಸವಾಲಾಗಿದೆ. ಇದು ಆಡಳಿತ ಮಂಡಳಿಯ ಕೆಲಸ. ಹೊಸ ಮುಖಗಳು ಸಂಘಕ್ಕೆ ಸೇರ್ಪಡೆಯಾದಂತೆ ಹೊಸ ವಿಚಾರಗಳು ಮೂಡಿಬರುತ್ತವೆ, ಕಾರ್ಯಕರ್ತರ ಸಂಖ್ಯೆ ಹೆಚ್ಚಾಗುತ್ತದೆ. ಈ ನಿಟ್ಟಿನಲ್ಲಿ ಸಂಘದ ಆಡಳಿತ ಮಂಡಳಿಯು ಪ್ರತೀ ಮೂರು ವರ್ಷಗಳಿಗೊಮ್ಮೆ ಹೊಸದಾಗಿ ರಚನೆಯಾಗುವಾಗ ಹೊಸ ಹೊಸ ಮುಖಗಳು ಸೇರ್ಪಡೆಯಾಗುವಂತೆ ನೋಡಿಕೊಳ್ಳಬೇಕು. ಅದೇ ರೀತಿ ಉಡುಪಿ ತಾಲೂಕಿನ ಎಲ್ಲಾ ಪ್ರದೇಶಗಳಿಂದಲೂ ನಿರ್ದೇಶಕರು ಆಯ್ಕೆಯಾದರೆ ಎಲ್ಲಾ ಪ್ರದೇಶದ ಸಮಾಜಬಾಂಧವರನ್ನು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಲು ಸಾಧ್ಯವಾಗುತದೆ.

ಸಂಘದ ಬೆಳವಣಿಗೆಗೆ ಆಡಳಿತ ಮಂಡಳಿಯ ನಿರ್ದೇಶಕರು ವಹಿಸುವ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಸಂಘದ ಚಟುವಟಿಕೆಗಳು ಧಾರ್ಮಿಕ, ವೈದ್ಯಕೀಯ , ಶಿಕ್ಷಣ, ಕಲೆ, ಸಾಹಿತ್ಯ, ಪತ್ರಿಕೆ, ಯುವಜನ, ಕ್ರೀಡೆ, ಆರ್ಥಿಕ, ಮಹಿಳಾ ಚಟುವಟಿಕೆ, ಕಟ್ಟಡ ನಿರ್ಮಾಣ ಹೀಗೆ ಹತ್ತು ಹಲವಾರು ಕ್ಷೇತ್ರಗಳಿಗೆ ವಿಸ್ತಾರಗೊಂಡಿರುವುದರಿಂದ ಪ್ರತೀ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಉತ್ಸಾಹಿ ನಿರ್ದೇಶಕರುಗಳ ಅಗತ್ಯ ನಮ್ಮ ಸಂಘಕ್ಕಿದೆ. ಗುಂಪುಗಾರಿಕೆಯ ಮನೋಭಾವವನ್ನು ಬದಿಗೊತ್ತಿ ಕೂಡಿ ಕೆಲಸಮಾಡುವುದನ್ನೂ ನಾವು ರೂಢಿಗೊಳಿಸಿಕೊಳ್ಳಬೇಕಾಗಿದೆ. ಹಾಗಾಗಿ ಈ ಆಶಯಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸಂಘದ ನಿರ್ದೇಶಕರುಗಳನ್ನು ಆಯ್ಕೆಮಾಡುವ ಚುನಾವಣಾ ಪ್ರಕ್ರಿಯೆಯಲ್ಲಿ ಬದಲಾವಣೆಯನ್ನು ತರಲಾಗಿದೆ.

ಇಲ್ಲಿಯ ತನಕ ಮಹಾಸಭೆಯಲ್ಲಿ ನಿರ್ದೇಶಕರುಗಳನ್ನು ಆಯ್ಕೆಮಾಡುವ ಸಮಯ ಬಂದಾಗ, ಸಭೆಯಲ್ಲಿ ಸೇರಿದ ಸದಸ್ಯರು ಎದ್ದು ನಿಂತು ತಮಗೆ ತೋಚಿದ ವ್ಯಕ್ತಿಯ ಹೆಸರನ್ನು ಸೂಚಿಸುತ್ತಿದ್ದರು. ಹೀಗೆ ಸೂಚಿಸಿದ ವ್ಯಕ್ತಿಯನ್ನು ಅವರ ಅನುಮತಿಯೊಂದನ್ನು ಪಡೆದು ನಂತರ ನಿರ್ದೇಶಕರೆಂದು ಘೋಷಿಸಲಾಗುತ್ತಿತ್ತು. ಈ ಪ್ರಕ್ರಿಯೆ ಪಾರದರ್ಶಕವಾಗಿದ್ದರೂ ಸಭೆಯ ಗದ್ದಲದ ನಡುವೆ ಅನೇಕ ಬಾರಿ ಯಾರನ್ನು ಸೂಚಿಸಲಾಯಿತು ಯಾರು ಆಯ್ಕೆಯಾದರು ಎಂದೇ ತಿಳಿಯುತ್ತಿರಲಿಲ್ಲ. ಅನೇಕ ಭಾರಿ ಆರಿಸಿದ ನಿರ್ದೇಶಕರುಗಳಿಗೆ ಆಸಕ್ತಿಯೂ ಇಲ್ಲದೆ ಒಂದೇ ಒಂದು ಆಡಳಿತ ಮಂಡಳಿಯ ಸಭೆಗಾಗಲಿ ಕಾರ್ಯಕ್ರಮಕ್ಕಾಗಲಿ ಹಾಜರಾಗದೆ ದಾಖಲೆ ಸೃಷ್ಟಿಸಿದ್ದೂ ಇದೆ. ಇನ್ನು ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಪಡೆದವರನ್ನು ಆಯುವ ವಿಷಯಕ್ಕಾಗಲಿ, ಪ್ರದೇಶವಾರು ಪ್ರಾಧಾನ್ಯತೆಗಾಗಲಿ ಅವಕಾಶವೇ ಇರಲಿಲ್ಲ ಆದುದರಿಂದ ಕೇವಲ ಹತ್ತು ನಿಮಿಷಗಳಲ್ಲಿ ಸಂಘದ ಮೂರು ವರ್ಷಗಳ ಭವಿಷ್ಯವನ್ನು ನಿರ್ಧರಿಸುವ ಈ ಕ್ರಮವನ್ನು ಕೈಬಿಟ್ಟು ಆಯ್ಕೆ ಪ್ರಕ್ರಿಯೆಯಲ್ಲಿ ಈ ಕೆಳಗಿನ ನೂತನ ಕ್ರಮವನ್ನು ಈ ವರ್ಷದಿಂದ ಆರಂಭಿಸಲಿದ್ದೇವೆ. ಹಾಗೂ ಇದಕ್ಕಾಗಿ ಸಂಘದ ನಿಯಮಾವಳಿಗಳಲ್ಲಿಯೂ ಬದಲಾವಣೆ ತರಲಾಗಿದೆ.

ಇನ್ನು ಮುಂದೆ ಮೂರು ವರ್ಷಗಳಿಗೊಮ್ಮೆ ವಾರ್ಷಿಕ ಮಹಾಸಭೆಯಲ್ಲಿ ಆಡಳಿತ ಮಂಡಳಿಯನ್ನು ಆರಿಸಬೇಕಾದಾಗ ಮೊತ್ತಮೊದಲಿಗೆ, ಸಾಕಷ್ಟು ಮುಂಚಿತವಾಗಿ, ಪ್ರಸಕ್ತ ಆಡಳಿತ ಮಂಡಳಿಯು ಸಭೆ ಸೇರಿ ಚುನಾವಣಾಧಿಕಾರಿಯನ್ನು ನೇಮಿಸಲಾಗುತ್ತದೆ. ಅವರು ವಾರ್ಷಿಕ ಮಹಾಸಭೆಗೆ ಒಂದು ತಿಂಗಳಿನ ಮುಂಚೆ ನೋಟೀಸು ಹೊರಡಿಸಿ ಆಡಳಿತ ಮಂಡಳಿಗೆ ನಿರ್ದೇಶಕರಾಗಲು

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಬಯಸುವವರಿಂದ ನಾಮಕರಣ ಪತ್ರ ಆಹ್ವಾನಿಸುತ್ತಾರೆ. ಈ ಬಾರಿ ಉಡುಪಿ ತಾಲೂಕಿನಲ್ಲಿ ನಮ್ಮವರು ಇರುವ ಗ್ರಾಮೀಣ ಪ್ರದೇಶಗಳನ್ನು ಗುರುತಿಸಿ ಪ್ರದೇಶವಾರು ಒಂದೊಂದು ಸ್ಥಾನಗಳನ್ನು ಮೀಸಲಾಗಿಡಲಾಗಿದೆ. ಮಹಿಳೆಯರಿಗಾಗಿ ಮೂರು ಸ್ಥಾನಗಳನ್ನು ಮೀಸಲಾಗಿಡಲಾಗಿದೆ. ನಾಮಪತ್ರ ಸಲ್ಲಿಕೆಗೆ ಎರಡು ವಾರಗಳ ಕಾಲಾವಕಾಶ ಇರುವುದರಿಂದ ಎಲ್ಲರಿಗೂ ಸರಿಯಾಗಿ ಯೋಚಿಸಿ ನಾಮಕರಣ ಪತ್ರ ಸಲ್ಲಿಸಲೂ ಹಾಗೂ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಅವರಿಂದ ನಾಮಕರಣ ಪತ್ರ ಕೊಡಿಸಲೂ ಅವಕಾಶವಿರುತ್ತದೆ. ಒಟ್ಟು 27 ಜನ ನಿರ್ದೇಶಕರನ್ನು ಆಯ್ಕೆ ಮಾಡಬಹುದು. ಒಂದು ವೇಳೆ ಆಸಕ್ತರ ಸಂಖ್ಯೆ 27ಕ್ಕಿಂತ ಹೆಚ್ಚಿದ್ದರೆ ಮಹಾಸಭೆಯಂದು ಚುನಾವಣೆ ನಡೆಸಲಾಗುತ್ತದೆ. ಆವಾಗ ಸದಸ್ಯರಿಗೆ ಶಾಂತ ವಾತಾವರಣದಲ್ಲಿ ಅರ್ಹರನ್ನು ಆರಿಸಲು ಅವಕಾಶ ಸಿಗುತ್ತದೆ.

ಹೀಗೆ ಮುಕ್ತ ಹಾಗೂ ನ್ಯಾಯಸಮ್ಮತ ಆಯ್ಕೆ ಪ್ರಕ್ರಿಯೆಯಿಂದ ಸಂಘದ ಏಳಿಗೆಯೂ ಆಗುವುದಲ್ಲದೇ ಘನತೆಯೂ ಹೆಚ್ಚುತ್ತದೆ.

# ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿದ ಉಡುಪಿಯ ಕಾರ್ಪ್ ಮ್ಯೂಸಿಯಂ

– ವೈ. ಮೋಹನ ರಾವ್

ಉಡುಪಿಯ ಕಾರ್ಪೋರೇಶನ್ ಬ್ಯಾಂಕಿನ ಆವರಣದಲ್ಲಿರುವ ಕಾರ್ಪೋರೇಶನ್ ಬ್ಯಾಂಕ್ ಹೆರಿಟೇಜ್ ಮ್ಯುಸಿಯಂ "ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್" ಸೇರಿ ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರವಾಗಿದೆ. ಜೂನ್ 23ರಂದು ಅಧಿಕೃತವಾಗಿ ಈ ಘೋಷಣೆ ಮಾಡಲ್ಪಟ್ಟಿತು. 2011 ಮಾರ್ಚ್ 12 ರಂದು ಆಗಿನ ಕೇಂದ್ರದಲ್ಲಿ ಹಣಕಾಸು ಸಚಿವರಾಗಿದ್ದ ಪ್ರಣವ್ ಮುಖರ್ಜಿ ಇವರಿಂದ ಹೆರಿಟೇಜ್ ಮ್ಯೂಸಿಯಂ ಉದ್ಘಾಟಿಸಲ್ಪಟ್ಟಿತ್ತು. ಈಗ ಹೆರಿಟೇಜ್ ಮ್ಯೂಸಿಯಂ ವಿಶ್ವದಾಖಲೆಯಾಗಿ ವಿಶ್ವ ಮನ್ನಣೆ ಪಡೆದಿದೆ. 3 ತಿಂಗಳುಗಳ ಹಿಂದೆ ಸುಪ್ರೀಂ ಕೋರ್ಟ್ ನ್ಯಾಯವಾದಿ ಸಂತೋಷ್ ಶುಕ್ಲ ಹೆರಿಟೇಜ್ ಮ್ಯೂಸಿಯಂಗೆ ಆಗಮಿಸಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಮ್ಯೂಸಿಯಂನ ಕ್ರಮವಾದ ವ್ಯವಸ್ಥೆ ಮತ್ತು ಹಳೆಯ ನಾಣ್ಯಗಳ ಹಾಗೂ ಕರೆನ್ಸಿ ನೋಟುಗಳ ಸಮಗ್ರ ವಿವರಗಳನ್ನು ಕಂಡು ಸಂಸ್ಥೆಯ ನಿರ್ದೇಶಕರಾಗಿದ್ದ ಅವರು ಐತಿಹಾಸಿಕ ನಿರ್ಧಾರವನ್ನು ಪ್ರಕಟಿಸಿದರು. ಅವರ ಪ್ರಯತ್ನದ ಫಲವಾಗಿ ಹೆರಿಟೇಜ್ ಮ್ಯೂಸಿಯಂ ವಿಶ್ವ ಮನ್ನಣೆಗಳಿಸಿತು ಎನ್ನಬಹುದು. ಸರ್ಟಿಫಿಕೇಟಿನ ಪ್ರತಿಯನ್ನು ಪಡೆದ ಹೆರಿಟೇಜ್ ಮ್ಯೂಸಿಯಂನ ಕ್ಯುರೇಟರ್ ಮತ್ತು ಗೈಡ್ ಆಗಿರುವ ಕೃಷ್ಣಯ್ಯ. ಎಂ. ಕೆ ಅವರು ತುಂಬ ಸಂತೋಷ ವ್ಯಕ್ತ ಪಡಿಸಿದರು. ಅವರು ನುಡಿದರು–" ಇದು ಅತ್ಯಂತ ಮಹತ್ವದ ವಿಷಯ. ಪಠ್ಯ ಪುಸ್ತಕಗಳಲ್ಲಿ ಇವೆಲ್ಲಾ ಇರುವುದಿಲ್ಲ. ನಾವು ಜನರಿಗೆ ವಿವರವನ್ನು ತಿಳಿಸಬೇಕು. ವಿದೇಶಗಳಿಂದ ಜನ ಉಡುಪಿಗೆ ಬರುವ ಅವಕಾಶವಿದೆ. ಈಗ ಸುಮಾರು 80



ಜನ ದಿನಂಪ್ರತಿ ಭೇಟಿ ನೀಡುತ್ತಿದ್ದಾರೆ".

ಜೂನ್ 25ರಂದು ಕಾರ್ಪೋರೇಶನ್ ಬ್ಯಾಂಕಿನ ಹಿರಿಯ ಅಧಿಕಾರಿಗಳು ಸೇರಿ ಹೆರಿಟೇಜ್ ಮ್ಯೂಸಿಯಂನಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಿದರು ಅಭಿನಂದನಾ ಸಮಾರಂಭದಲ್ಲಿ ಬ್ಯಾಂಕಿನ ಮಹಾಪ್ರಬಂಧಕರಾದ ಶ್ರೀವಾತ್ಸವ, ಉಪ ಮಹಾಪ್ರಬಂಧಕಿ ಡೇಲಿಯಾ ಡಯಾಜ್, ಮುಖ್ಯ ಪ್ರಬಂಧಕ ಜಗದೀಶ ನಾಯಕ್, ಶಿವರಾಂ ಕೃಷ್ಣನ್, ಹಿರಿಯ ಪ್ರಬಂಧಕರಾದ ಗುರುಪ್ರಸಾದ ಬಲ್ಲಾಳ್, ಮ್ಯೂಸಿಯಂನ ಕ್ಯುರೇಟರ್ ಮತ್ತು ಮಾರ್ಗದರ್ಶಕರಾದ ಕೃಷ್ಣಯ್ಯ ಎಂ. ಕೆ ಉಪಸ್ಥಿತರಿದ್ದರು.

ಹೆರಿಟೇಜ್ ಮ್ಯೂಸಿಯಂ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆಗೊಂಡ ಸಂದರ್ಭದಲ್ಲಿ ಹಾಜಿ ಅಬ್ದುಲ್ಲ ಇವರ ಕುಟುಂಬದವರು ಶ್ರೀ ಕೃಷ್ಣಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದರು. ಮ್ಯೂಸಿಯಂನ್ನು ವ್ಯವಸ್ಥಿತ ಕ್ರಮ ಮಾಡುವಲ್ಲಿ ಕೃಷ್ಣಯ್ಯ ನವರ ಪಾತ್ರವನ್ನು ಪ್ರಶಂಸಿಸಿದರು.

ಖಾನ್ ಬಹಾದುರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬ್ ಬಹಾದುರ್ ಇವರ ನಿವಾಸದಲ್ಲೇ ಇವರ ಹೆಸರಲ್ಲಿ ಹೆರಿಟೇಜ್ ಮ್ಯೂಸಿಯಂನನ್ನು ಸ್ಥಾಪಿಸಲಾಗಿದೆ. ಈ ಕಟ್ಟಡವನ್ನು ಹಾಜಿ ಅಬ್ದುಲ್ಲ ಅವರು ದಾನವಾಗಿ ನೀಡಿದ್ದರು. ಅವರು ತನ್ನ ಭೂಮಿಯನ್ನೆಲ್ಲಾ ಧಾನ ಮಾಡಿದ ಮಹಾದಾನಿ. ಅವರು ಕಾರ್ಪೋರೇಶನ್ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರು. 1906ರಲ್ಲಿ 'ದಿ ಕೆನರಾ ಬ್ಯಾಂಕಿಂಗ್ ಕಾರ್ಪ್‌ರೇಷನ್ ಲಿಮಿಟೆಡ್' ಅನ್ನು ಸ್ಥಾಪಿಸಿದರು. ನಂತರ ಇದು ಕಾರ್ಪೋರೇಶನ್ ಬ್ಯಾಂಕ್ ಎಂದು ಪುನರ್‌ನಾಮಗೊಂಡಿತು. ತನ್ನ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಕಾರ್ಪೋರೇಶನ್ ಬ್ಯಾಂಕ್ ತನ್ನ ದೂರದರ್ಶಿತ್ವದ ಸ್ಥಾಪಕ ಅಧ್ಯಕ್ಷರಿಗೆ ಮಹತ್ವಪೂರ್ಣ 100 ವರ್ಷಗಳ ಸ್ಫೂರ್ತಿಗಾಗಿ ಗೌರವಪೂರ್ಣ ನಮನಗಳನ್ನು ಅರ್ಪಿಸಿತು.

ಹೆರಿಟೇಜ್ ಮ್ಯೂಸಿಯಂ ಕ್ರಿ.ಪೂ.400 ರಿಂದ ಇಂದಿನವರೆಗಿನ ವಿವಿಧ ಸಾಮ್ರಾಜ್ಯ ಆಡಳಿತಗಳ 1800ಕ್ಕೂ ಅಧಿಕ ಅಪೂರ್ವ ನಾಣ್ಯಗಳನ್ನು ಸಂಗ್ರಹಿಸಿಡಲಾಗಿದೆ. ರೂ.1ರಿಂದ 1000ರೂಪಾಯಿ. ಮುಖಬೆಲೆಯ ಸ್ಮರಣಿಕೆ ನಾಣ್ಯಗಳು ಹಾಗೂ ದೇಶ ಮತ್ತು ವಿದೇಶಗಳ ಕರೆನ್ಸಿ ನೋಟುಗಳಿವೆ. ವಿವಿಧ ಚೀಟಿಗಳು, ಅಂಚೆ ಕವರುಗಳು, ಬೆಳ್ಳಿಯ ರೂ.200, ರೂ500, ರೂ25 ನಾಣ್ಯಗಳು ಇಲ್ಲಿವೆ. ಗಾಂಧಾರ, ಸೌರಾಷ್ಟ್ರ, ಅಶೋಕ ಸಹಿತ

(3ನೇ ಪುಟಕ್ಕೆ...)

## ಮಹಾಪೋಷಕರಾಗಿ ಶ್ರೀಮತಿ ಟಿ. ಹರಿಣಿ



ಉಡುಪಿ ಕುಂಜಿಬೆಟ್ಟಿನ ಶ್ರೀಮತಿ ಟಿ. ಹರಿಣಿ ಇವರು ಶ್ರೀಶಾರದಾ ಪತ್ರಿಕೆಯನ್ನು ಮೆಚ್ಚಿ ಮಹಾಪೋಷಕರಾಗಿ ಪ್ರೋತ್ಸಾಹಿಸಿದ್ದಾರೆ. ಇವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದ ದಿವಂಗತ ಶ್ರೀ ತಂತ್ರಾಡಿ ಕೃಷ್ಣಮೂರ್ತಿ ಶ್ಯಾನುಭಾಗರ ಪತ್ನಿ. ಸಂಗೀತದಲ್ಲಿ ವಿಶೇಷ ಆಸಕ್ತಿ ಹಾಗೂ ಪರಿಣಿತಿಯನ್ನು ಹೊಂದಿದ್ದಾರೆ. ಶ್ರೀ ಶಾರದಾ ಭಜನಾ ಮಂಡಳಿಯ ಸಕ್ರಿಯ ಸದಸ್ಯೆಯಾಗಿದ್ದಾರೆ. ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ವೃಂದದ ಅಧ್ಯಕ್ಷರಾದ ಶ್ರೀ ವಿಶ್ವನಾಥ ಶ್ಯಾನುಭಾಗರ ತಾಯಿ. ಇವರ ಇನ್ನೋರ್ವ ಪುತ್ರಿ ಶ್ರೀಮತಿ ವಿದ್ಯಾರವಿಶಂಕರ್ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರ ಮೊಮ್ಮಕ್ಕಳಾದ ಟಿ. ಸ್ಕಂದ ಹಾಗೂ ಟಿ. ಸಂಕಲ್ಪ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶ್ರೀಮತಿ ಟಿ.ಹರಿಣಿ ಇವರಿಗೆ ಶ್ರೀ ಶಾರದಾ ಬಳಗವು ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತದೆ.






## ಕಳೆದ ಮೂರು ವರ್ಷಗಳ ಸಿಂಹಾವಲೋಕನ

■...1ನೇ ಪುಟದಿಂದ

ನಮ್ಮವರ ಸಂಪರ್ಕ ವಿಳಾಸದ ವಿವರಗಳನ್ನು ಕಲೆ ಹಾಕುವುದು ಅಗತ್ಯವಾಗಿತ್ತು. ಉಡುಪಿ ತಾಲೂಕಿನಲ್ಲಿ ಸುಮಾರು 700ಕ್ಕೂ ಮಿಕ್ಕಿ ನಮ್ಮವರ ಮನೆಗಳಿದ್ದು ನಮ್ಮ ಸಂಘದಲ್ಲಿದ್ದ ವಿಳಾಸ ಪುಸ್ತಕವು ಹಳೆಯದಾಗಿತ್ತು. ಹಾಗಾಗಿ ಪ್ರಸಕ್ತ ಆಡಳಿತಮಂಡಳಿಯು ನಾನಾ ವಿಧಗಳಲ್ಲಿ ಉಡುಪಿ ತಾಲೂಕಿನಲ್ಲಿರುವ ನಮ್ಮ ಸಮಾಜಬಾಂಧವರ ವಿಳಾಸ, ಪತಿ ಪತ್ನಿಯರ ಹೆಸರು, ಉದ್ಯೋಗ ಮಾಹಿತಿ, ಮೊಬೈಲ್ ಸಂಖ್ಯೆ ಹಾಗೂ ಮಿಂಚಂಚೆ ವಿಳಾಸ ಇತ್ಯಾದಿಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿತು.

ಜೊತೆಗೆ ಶ್ರೀ ಎಲ್ಲೂರು ಲಕ್ಷ್ಮೀ ನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟನ ಸಹಭಾಗಿತ್ವದಲ್ಲಿ ಅಂತರ್ಜಾಲದಲ್ಲಿ “ಸ್ಥಾನಿಕ” ಎಂಬ ಹೆಸರಿನ ಮೊಬೈಲ್ ಆ್ಯಪ್‌ನ್ನು ಬಿಡುಗಡೆಗೊಳಿಸಲಾಯಿತು. ಈ ಮೊಬೈಲ್ ಆ್ಯಪ್ ಪ್ರಪಂಚದಲ್ಲಿರುವ ಎಲ್ಲಾ ದೇಶಗಳಲ್ಲಿರುವ ಸ್ಥಾನಿಕ ಬಾಂಧವರ ವಿಳಾಸವನ್ನು ದೇಶ ರಾಜ್ಯ ಹಾಗೂ ತಾಲೂಕು ಮಟ್ಟದಲ್ಲಿ ಸಂಗ್ರಹಿಸಿ ನೀಡುತ್ತದೆ. ಸಮಾಜಬಾಂಧವರು ಈ ಆ್ಯಪ್‌ನ್ನು ಪ್ಲೇಸ್ಟೋರ್‌ನಿಂದ ತಮ್ಮ ಮೊಬೈಲಿಗೆ ಉಚಿತವಾಗಿ ವರ್ಗಾಯಿಸಿಕೊಂಡು ತಮ್ಮ ವಿಳಾಸ ಹಾಗೂ ಇತರ ಮಾಹಿತಿಗಳನ್ನು ಸ್ವಯಂ ನೊಂದಾಯಿಸಬಹುದು.

ಈ ಆಡಳಿತಮಂಡಳಿಯಿಂದಾಗಿರುವ ಕೆಲಸಗಳಲ್ಲಿ ಶ್ರೀ ಶಾರದಾ ಮಂಟಪದ ಸಮಗ್ರ ನವೀಕರಣವು ಎದ್ದು ಕಾಣುವ ಕೆಲಸವಾಗಿದೆ. ಆನಂದರಾವ್ ಸಭಾಭವನ, ಪ್ರವೇಶ ಕೊಠಡಿ ಹಾಗೂ ವಧೂವರರ ಕೊಠಡಿಗಳ ನೆಲಕ್ಕೆ ಮತ್ತು ಗೋಡೆಗಳಿಗೆ ಟೈಲ್ಸ್ ಹೊದಿಸುವಿಕೆ, ವಧೂವರರ ಕೋಣೆಗೆ ವಾತಾನುಕೂಲ ಅಳವಡಿಕೆ, ಶೌಚಾಲಯದ ನವೀಕರಣ, ಜ್ಞಾನಮಂದಿರದ ನೆಲ ಹಾಗೂ ಗೋಡೆಗಳಿಗೆ ಟೈಲ್ಸ್ ಅಳವಡಿಕೆ, ಜ್ಞಾನಮಂದಿರದ ಮಾಳಿಗೆಗೆ ಫಾಲ್ಸ್ ಸೀಲಿಂಗ್ ಅಳವಡಿಕೆ ಹೀಗೆ ಅನೇಕ ಕಾಮಗಾರಿಗಳನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಮುಕ್ತಾಯಗೊಳಿಸಿ ಶ್ರೀ ಶಾರದಾ ಮಂಟಪಕ್ಕೆ ಹೊಸ ರೂಪವನ್ನು ನೀಡಲಾಗಿದೆ

ನಮ್ಮ ಸಂಘಕ್ಕೆ ಐವತ್ತು ವರ್ಷಗಳು ಪೂರ್ತಿಯಾದ ಪ್ರಯುಕ್ತ ಸುವರ್ಣ ಮಹೋತ್ಸವವನ್ನು ಆದ್ದೂರಿಯಾಗಿ 2017ನೇ ಇಸವಿಯ ಮೇ ತಿಂಗಳಿನಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿಳಾಸಪುಸ್ತಕದ ಬಿಡುಗಡೆ, ಸುವರ್ಣ ಮಹೋತ್ಸವ ಸಂಚಿಕೆ ಬಿಡುಗಡೆ ಹಾಗೂ “ಸ್ಥಾನಿಕ” ಆ್ಯಪ್‌ನ ಬಿಡುಗಡೆ ನೆರವೇರಿತು. ಸಂಘದ ವ್ಯವಹಾರಗಳ ಕಂಪ್ಯೂಟರೀಕರಣಕ್ಕೂ ಈ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳು ಈ ಸಂದರ್ಭದಲ್ಲಿ ಆಗಮಿಸಿದಾಗ ಪೂರ್ಣಕುಂಭ ಸ್ವಾಗತವನ್ನಿತ್ತು ಪಾದಪೂಜೆಗೈದು ಸತ್ಕರಿಸಲಾಯಿತು. ಶ್ರೀ ಶ್ರೀಗಳು ಒಂದು ದಿನ ಮಂಟಪದಲ್ಲಿ ಮೊಕ್ಕಾಂ ಹೂಡಿ, ಮರುದಿನ ಆಶೀರ್ವಚನವನ್ನಿತ್ತು ಅನುಗ್ರಹಿಸಿದರು.

ಸಂಘದ ನಿಯಮಾವಳಿಗಳನ್ನು ಐವತ್ತು ವರ್ಷಗಳ ಹಿಂದೆ ರಚಿಸಲಾಗಿದ್ದು ಕಾಲಬಾಧಿತವಾಗಿದ್ದುದರಿಂದ ಅದರ ಸಮಗ್ರ ಪರಿಷ್ಕರಣೆಯಾಗಬೇಕು ಎಂಬ ಬೇಡಿಕೆ ಹಲವಾರು ವರ್ಷಗಳಿಂದ ಇತ್ತು. ಪ್ರಸಕ್ತ ಆಡಳಿತ ಮಂಡಳಿಯು ಆಸಕ್ತಿಯಿಂದ ಈ ಕಾರ್ಯವನ್ನು ಕೈಗೆತ್ತಿಕೊಂಡಿತು. ಅದಕ್ಕಾಗಿ ಸಮಿತಿಯನ್ನು ರಚಿಸಿ ಹಲವಾರು ಸಂಘಸಂಸ್ಥೆಗಳ ನಿಯಮಾವಳಿಗಳನ್ನು ಅಧ್ಯಯನ ಮಾಡಿ, ಸಮಾಜದ ಹಿರಿಯರಿಂದ ಹಾಗೂ ಇತರ ಸಮಾಜಬಾಂಧವರಿಂದ ಸಲಹೆ ಸೂಚನೆಗಳನ್ನು ಪಡೆದು ಕರಡು ನಿಯಮಾವಳಿಯನ್ನು ರಚಿಸಲಾಯಿತು. ನಂತರ ಎರಡು ವಿಶೇಷ ಮಹಾಸಭೆಗಳನ್ನು ಈ ಉದ್ದೇಶಕ್ಕಾಗಿಯೇ ಕರೆದು ಚರ್ಚಿಸಿ ನಿಯಮಾವಳಿಗಳನ್ನು ಅಂತಿಮಗೊಳಿಸಲಾಯಿತು. ಈ ನಿಯಮಾವಳಿಗಳು ಸಂಘಸಂಸ್ಥೆಗಳ ರಿಜಿಸ್ಟ್ರಾರ್‌ರವರಿಂದ ಅಂಗೀಕೃತಗೊಂಡಿವೆ.

ಸಂಘದ ವತಿಯಿಂದ ಪ್ರತಿ ವರ್ಷವೂ ಆಯೋಜಿಸಲಾಗುತ್ತಿರುವ ಶ್ರೀ ಶಾರದಾ ಕ್ರಿಕೆಟ್ ಕಪ್ ಪಂದ್ಯಾಕೂಟಕ್ಕೆ 2017ನೇ ಇಸವಿಯಲ್ಲಿ ಇಪ್ಪತ್ತೈದು ವರ್ಷಗಳು ಪೂರ್ತಿಯಾಗಿತ್ತು. ಆದುದರಿಂದ ಆ ವರ್ಷ ಶ್ರೀ ಶಾರದಾ ಕ್ರಿಕೆಟ್ ಪಂದ್ಯಾಟವನ್ನು ಅದ್ದೂರಿಯಾಗಿ ಆಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಆಟಗಾರ ಶ್ರೀ ಕುಮಾರಸ್ವಾಮಿಯವರು ಈ ಪಂದ್ಯಾಟವನ್ನು ಉದ್ಘಾಟಿಸಿದ್ದರು.

ಮಹಿಳಾವೇದಿಕೆಯವರು ಶ್ರೀಶಾರದಾ ದೇವಸ್ಥಾನದಲ್ಲಿ ಹಾಡುವ ಭಜನೆಗಳ ಪುಸ್ತಕ “ಉಪಾಸನಾ ಮಂಜರಿ”ಯನ್ನು ಪರಿಷ್ಕರಿಸಿ ಇನ್ನೂ ಹಲವಾರು ಪ್ರಸಿದ್ಧ ಭಜನಾಹಾಡುಗಳನ್ನು ಸೇರಿಸಿ ಒಟ್ಟು 118 ಭಜನೆಗಳುಳ್ಳ “ಉಪಾಸನಾ ಮಂಜರಿ–2”ನ್ನು ಮುದ್ರಿಸಿ ಬಿಡುಗಡೆ ಮಾಡಲಾಯಿತು.

ಶ್ರೀ ಶಾರದಾ ಪತ್ರಿಕೆಯು ನಮ್ಮ ಸಂಘದ ಮುಖವಾಣಿ. ಈ ಪತ್ರಿಕೆಯನ್ನು ಇನ್ನಷ್ಟು ಜನಪ್ರಿಯಗೊಳಿಸಲು ಹಾಗೂ ಅದರ ಮುದ್ರಣದ ಗುಣಮಟ್ಟವನ್ನು ಇನ್ನಷ್ಟು ಉತ್ತಮಗೊಳಿಸಲು ಕಳೆದ ಮೂರು ವರ್ಷಗಳಿಂದ ಬಹುವರ್ಣದ ಪುಟಗಳಲ್ಲಿ ಮುದ್ರಿಸುತ್ತಿದ್ದೇವೆ. ಅದರಲ್ಲಿ ಸಂಪಾದಕೀಯ, ನಮ್ಮ ದೇವಸ್ಥಾನಗಳ ಪರಿಚಯ , ನಮ್ಮವರು ಬರೆದು ಪ್ರಕಟಿಸಿದ ಪುಸ್ತಕ ಪರಿಚಯ ಇತ್ಯಾದಿ ನಮ್ಮ ಸಮಾಜಕ್ಕೆ ಸಂಬಂಧಿಸಿದ ವಿಷಯಗಳ ಅಂಕಣಗಳನ್ನು ಆರಂಭಿಸಿದ್ದು ಬಹುಜನರ ಪ್ರಶಂಸೆಗೆ ಪಾತ್ರವಾಗಿದೆ. ಚಿಣ್ಣರ ಅಂಗಳದ ಮೂಲಕ ಬಾಲಕರಿಗೆ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಲು ಉತ್ತೇಜನ ನೀಡಲಾಗಿದೆ. ನಮ್ಮವರ ಸಾಧನೆಗಳ ಸುದ್ದಿ, ಕವನ, ಲೇಖನ, ಪ್ರವಾಸ ಕಥನ ಇತ್ಯಾದಿ ಬರಹಗಳನ್ನು ಪ್ರಕಟಿಸುತ್ತಾ ವಿಚಾರ ವಿನಿಮಯಕ್ಕೆ ವೇದಿಕೆಯನ್ನು ಕಲ್ಪಿಸಲಾಗಿದೆ. ಕಾಲಕಾಲಕ್ಕೆ ಪ್ರಸ್ತುತವೆನಿಸುವ ಲೇಖನಗಳನ್ನು ಬರಹಗಾರರಿಂದ ಬರೆಸಿ ಪ್ರಕಟಿಸುತ್ತಾ ಸಮಾಜಬಾಂಧವರು ಪತ್ರಿಕೆಯ ಮೇಲೆ ಇನ್ನಷ್ಟು ಆಸಕ್ತಿಯನ್ನು ತೋರುವಂತೆ ಮಾಡಲಾಗಿದೆ.

ಇತರ ಸಂಘಸಂಸ್ಥೆಗಳೊಂದಿಗೆ ಅತ್ಯುತ್ತಮ ಸಂವಹನವನ್ನು ಬೆಳೆಸಿಕೊಂಡದ್ದು ಪ್ರಸಕ್ತ ಆಡಳಿತ ಮಂಡಳಿಯ ಮುತ್ಸದ್ದಿತನವನ್ನು ತೋರಿಸುತ್ತದೆ. ಮಂಗಳೂರಿನಲ್ಲಿನಡೆದ ಸಮಾವೇಶ,ಬೆಳ್ತಂಗಡಿ, ಸುರತ್ಕಲ್ ಕುಂದಾಪುರ, ಕಾರ್ಕಳ, ಮೂಡಬಿದರೆ ಸಂಘಗಳ ವಾರ್ಷಿಕೋತ್ಸವ, ಪಡುಬಿದ್ರೆ, ಮಠದಬೆಟ್ಟು, ಮುಂಡ್ಕೂರು, ಬಳ್ವ, ದೇವಾಲಯಗಳ ಉತ್ಸವ, ಪಾದೆಬೆಟ್ಟು ದೇವಸ್ಥಾನದ ವೈದಿಕ ಶಿಬಿರ ಇತ್ಯಾದಿ ಕಾರ್ಯಕ್ರಮಗಳಿಗೆ ಬೇಟಿಯಿತ್ತು, ಭಾಗವಹಿಸಿ, ಅಲ್ಲಿಯ ವರದಿಯನ್ನು ಸಂಗ್ರಹಿಸಿ ಶ್ರೀ ಶಾರದಾ ಪತ್ರಿಕೆಯಲ್ಲಿ ಬರೆದು ಪ್ರಕಟಿಸಿ, ಇತರ ಸಂಘಗಳೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಲಾಗಿದೆ. ಇತರ ಸಂಘಗಳ ಪದಾಧಿಕಾರಿಗಳನ್ನು ನಮ್ಮ ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವಿಸಲಾಗಿದೆ.

ಪ್ರತೀ ವರ್ಷ ನಾಗರ ಪಂಚಮಿ ಹಬ್ಬದೊಂದಿಗೆ ಸಂಘದ ಚಟುವಟಿಕೆಗಳು ಆರಂಭವಾಗುತ್ತವೆ. ಎರಡು ತಿಂಗಳ ಮಳೆಯಲ್ಲಿ ಶ್ರೀ ಶಾರದ ಮಂಟಪದ ವಠಾರದಲ್ಲಿ ಬಿದ್ದ ಕಸ ಪಾಚಿಗಳನ್ನು ತೆಗೆದು ಸ್ವಚ್ಚಗೊಳಿಸುವ ಕಾರ್ಯ ಸಂಘದ ಕಾರ್ಯಕರ್ತರಿಂದ ಕಳೆದ ಮೂರುವರ್ಷಗಳಲ್ಲಿ ಸತತವಾಗಿ ನಡೆದಿರುವುದು ಅಭಿನಂದನಾರ್ಹ

ಪ್ರತೀವರ್ಷವೂ ಕೈಗೊಳ್ಳುವ, ನಾಗರಪಂಚಮಿ, ವರಮಹಾಲಕ್ಷ್ಮೀವ್ರತ, ಉಪಾಕರ್ಮ , ನವರಾತ್ರಿ, ಚಂಡಿಕಾಹೋಮ, ಕ್ರಿಕೆಟ್, ಮಹಿಳಾ ಕ್ರೀಡಾಕೂಟ, ಪ್ರವಾಸ, ಶಿವರಾತ್ರಿ, ಶಂಕರಜಯಂತಿ, ಸಾಮೂಹಿಕ ಉಪನಯನ, ಕಿರುನವರಾತ್ರಿ, ದುರ್ಗಾ ನಮಸ್ಕಾರ, ಸಾಮೂಹಿಕ ಹೂವಿನಪೂಜೆ, ಶೃಂಗೇರಿ ಭೇಟಿ, ಸೌಂದರ್ಯ ಲಹರೀ ಸಪ್ತಾಹ, ಪ್ರತಿಷ್ಠಾ ಮಹೋತ್ಸವ, ವಿದ್ಯಾರ್ಥಿ ವೇತನ ವಿತರಣೆ, ಕಟ್ಟಡ ನಿರ್ವಹಣೆಗಳನ್ನು ಕೂಡಾ ಪ್ರತೀವರ್ಷದಂತೆಯೇ ಈ ಮೂರೂ ವರ್ಷಗಳಲ್ಲಿಯೂ ನಡೆಸಲಾಗಿದೆ.

ಹೀಗೆ ಪ್ರಸಕ್ತ ಆಡಳಿತಮಂಡಳಿಯು ಆಸಕ್ತಿಯಿಂದ ಹಾಗೂ ಸ್ವಯಂಸ್ಫೂರ್ತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು, ಯಶಸ್ವಿಯಾಗಿ ನಿರ್ವಹಿಸಿ ಸಮಾಜಬಾಂಧವರ ಪ್ರಶಂಸೆಗೆ ಪಾತ್ರವಾಗಿದೆ. ಈ ವರ್ಷ ನಡೆಯಲಿರುವ ಮಹಾಸಭೆಯಲ್ಲಿ ಹೊಸ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಬೇಕಾಗಿದೆ. ಈ ಮೂರು ವರ್ಷಗಳಲ್ಲಿ ನಡೆದ ಕೆಲಸಗಳು ಮುಂದಿನ ಆಡಳಿತಮಂಡಳಿಗೆ ಮಾದರಿಯಾಗಲಿ ಹಾಗೂ ಇನ್ನೂ ಹೆಚ್ಚು ಹೊಸ ಯೋಜನೆಗಳನ್ನು ಹಾಕಿಕೊಂಡು ಸಮಾಜಸೇವೆಗೈಯಲಿ ಎಂದು ಹಾರೈಕೆ.

## ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿದ ಉಡುಪಿಯ ಕಾರ್ಪ್ ಮ್ಯೂಸಿಯಂ

■...2ನೇ ಪುಟದಿಂದ

ಪ್ರತಿಯೊಂದು ಸಾಮ್ರಾಜ್ಯ, ಹಳೆಯ ರಾಜರ ಆಡಳಿತದ ಹಳೆಯ ನಾಣ್ಯಗಳು, ನಕಾಶೆಗಳ ಮಾಹಿತಿ ಇಲ್ಲಿ ದೊರೆಯುತ್ತದೆ. ಮ್ಯೂಸಿಯಂ ಪ್ರದರ್ಶಿಸುತ್ತಿರುವ ಎಲ್ಲಾ ನಾಣ್ಯಗಳನ್ನು ಶ್ರೀ ಜಯಪ್ರಕಾಶ ರಾವ್ ಅವರಿಂದ ಖರೀದಿಸಿ ಇಟ್ಟಿದೆ.

ಹಾಜಿ ಅಬ್ದುಲ್ಲ ಹೆರಿಟೇಜಿನ ಕ್ಯುರೇಟರ್ ಮತ್ತು ಮಾರ್ಗದರ್ಶಕರಾಗಿ ಕೃಷ್ಣಯ್ಯ ಎಂ. ಕೆ. ಇವರು ಅದ್ಭುತ ಸೇವೆ ಸಲ್ಲಿಸುತ್ತಾ ಇದ್ದಾರೆ. ಇವರು ಕಾರ್ಪೊರೇಶನ್ ಬ್ಯಾಂಕಿನ ವಿಶ್ರಾಂತ ಅಧಿಕಾರಿಗಳು. ಇವರು ಬಾಲ್ಯದಿಂದಲೂ ಅಂಚೆಚೀಟಿ ಸಂಗ್ರಹದ ಹವ್ಯಾಸ ಬೆಳೆಸಿಕೊಂಡವರು. ದಕ್ಷಿಣ ಕನ್ನಡ ಅಂಚೆ ಚೀಟಿ ಸಂಗ್ರಾಹಕರ ಸಂಘದ ಕಾರ್ಯದರ್ಶಿ. ಅಂಚೆ ಚೀಟಿಯಲ್ಲಿ ಧ್ವಜಗಳು ಇವರ ಇನ್ನೊಂದು ವಿಶೇಷ ಸಂಗ್ರಹ. “ಅಂಚೆಚೀಟಿಯಲ್ಲಿ ಅಕ್ಷರಮಾಲೆ” ಇದು ಇವರ ಇನ್ನೊಂದು ಅಪೂರ್ವ ಸಾಧನೆ. ಮಂಗಳೂರು ಫಿಲಾಟೆಲಿಕ್ ಕ್ಲಬ್ಬಿನ ಸದಸ್ಯರಾಗಿ ಕ್ರಿಯಾಶೀಲ ವ್ಯಕ್ತಿಯಾಗಿದ್ದಾರೆ. ಇತ್ತೀಚೆಗಿನ ದ.ಕ.ಫ. ಪತ್ರಿಕೆಯ ಜವಾಬ್ದಾರಿ ಇವರದ್ದು. ಅನೇಕ ಶಾಲೆಗಳಲ್ಲಿ ಅಂಚೆ ಚೀಟಿ ಸಂಗ್ರಹದ ಕಮ್ಮಟ, ಕಾರ್ಯಾಗಾರ ನಡೆಸುತ್ತಿದ್ದಾರೆ. ಇವರು ಈಗ ಉಡುಪಿಯ ಕಾರ್ಪೊರೇಶನ್ ಬ್ಯಾಂಕ್ ಸ್ಥಾಪಿಸಿದ ಹಾಜಿ ಅಬ್ದುಲ್ಲ ಅವರ ಮನೆಯಲ್ಲಿ ನಾಣ್ಯಗಳ ಮ್ಯೂಸಿಯಂನ್ನು ನೋಡಿಕೊಳ್ಳುವ ಕಾರ್ಯ ನಿರ್ವಹಿಸುತ್ತಿದ್ದಾರೆ. (ಕ್ಯೂರೇಟರ್ ಮತ್ತು ಗೈಡ್). ರಾಷ್ಟ್ರಮಟ್ಟ, ರಾಜ್ಯಮಟ್ಟ ಮತ್ತು ಜಿಲ್ಲಾ ಮಟ್ಟಗಳಲ್ಲಿ ಅಂಚೆಚೀಟಿ ಸಂಗ್ರಹದ ಪ್ರದರ್ಶನಗಳಿಗೆ ಅನೇಕ ಪ್ರಶಸ್ತಿಗಳು ಇವರಿಗೆ ದೊರಕಿವೆ. ಮಕ್ಕಳಲ್ಲಿ ಅಂಚೆಚೀಟಿ ಸಂಗ್ರಹದ ಹವ್ಯಾಸವನ್ನು ಬೆಳೆಸುವ ಉದ್ದೇಶ ಇವರಿಗಿದೆ.

ಹಾಜಿ ಅಬ್ದುಲ್ಲ ಹೆರಿಟೇಜ್ ಮ್ಯೂಸಿಯಂನ ಕಾರ್ಯಾಚರಣೆ ತಿಳಿದುಕೊಳ್ಳಲು ನಾವು ಪ್ರತಿಯೊಬ್ಬರೂ ಮ್ಯೂಸಿಯಂನ್ನು ಸಂದರ್ಶಿಸೋಣ. ಉಡುಪಿಯ ಆಭರಣ ಜ್ಯುವೆಲ್ಲರ್ಸ್ ಇದರ ಸಮೀಪ ಈ ಮ್ಯೂಸಿಯಂ ಇದೆ. ಮ್ಯೂಸಿಯಂ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ರವಿವಾರ ಹೊರತುಪಡಿಸಿ ಉಳಿದೆಲ್ಲಾ ದಿನಗಳಂದು ತೆರೆದಿರುತ್ತದೆ. ನಿಜವಾಗಿಯೂ ಕೃಷ್ಣಯ್ಯ ಎಂ.ಕೆ. ಅವರು ಹಳೆಯ ನಾಣ್ಯಗಳ, ಕರೆನ್ಸಿ ನೋಟುಗಳ ಮತ್ತು ವಿವಿಧ ಅಂಚೆ ಚೀಟಿಗಳ ನಡೆದಾಡುವ ಶಬ್ದಕೋಶವಾಗಿರುವರು. ಹೆರಿಟೇಜ್ ಮ್ಯೂಸಿಯಂಗೆ ‘ವರ್ಲ್ಡ್ ಬುಕ್ ಆಫ್ ರೆಕಾರ್ಡ್’ಗೆ ಸೇರ್ಪಡೆಯಾದ ಶುಭ ಸಂದರ್ಭದಲ್ಲಿ ಕೃಷ್ಣಯ್ಯ ಎಂ. ಕೆ. ಮತ್ತು ಅವರಿಗೆ ಸದಾ ಸಹಕಾರವನ್ನು ನೀಡುತ್ತಿರುವ ಅವರ ಪತ್ನಿ ಶ್ರೀಮತಿ ವಿದ್ಯಾವತಿ ಮತ್ತು ಅವರ ಪುತ್ರಿ ಮತ್ತು ಪುತ್ರರಿಗೆ ಅಭಿನಂದನೆಗಳನ್ನು ಸಲ್ಲಿಸೋಣ.

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-34**

## ತುದಿಯಡ್ಕ ಶ್ರೀ ಸದಾಶಿವ ದೇವಸ್ಥಾನ, ಸುಳ್ಯ,ದ.ಕ.



ಕಳೆದ ತಿಂಗಳು ಅಜ್ಜಾವರ ಮಹಿಷಮರ್ದಿನಿ ದೇವಾಲಯದ ಬಗ್ಗೆ ವಿವರಿಸುವಾಗ ದಿವಾನ ಲಕ್ಷ್ಮೀ ನಾರ್ಣಪ್ಪಯ್ಯನವರ ಬಗ್ಗೆ ಉಲ್ಲೇಖಿಸಿದ್ದೆ. ಇದೇ ಕುಟುಂಬಕ್ಕೆ ಸೇರಿದ ಇನ್ನೊಂದು ದೇವಸ್ಥಾನ ತುದಿಯಡ್ಕದಲ್ಲಿರುವ ಶ್ರೀ ಸದಾಶಿವ ದೇವಸ್ಥಾನ. ಪಯಸ್ವಿನಿ ನದೀತಟದಲ್ಲಿರುವ ಈ ದೇವಾಲಯಕ್ಕೆ ಹೋಗಲು ಸರಿಯಾದ ರಸ್ತೆ ಇಲ್ಲ. ಅಷ್ಟೊಂದು ಪ್ರಚಾರವೂ ಇಲ್ಲದ ಕಾರಣ ಊರವರಿಗೂ ಸರಿಯಾದ ದಾರಿ ಗೊತ್ತಿರುವುದಿಲ್ಲ. ದಟ್ಟಕಾಡಿನ ಅಂಚಿನಲ್ಲಿರುವುದರಿಂದಲೂ, ತುಂಬಾ ಮಳೆ ಬೀಳುವ ಪ್ರದೇಶವಾದುದರಿಂದಲೂ, ಕಾಡುಪ್ರಾಣಿಗಳು ತಿರುಗಾಡುತ್ತಿರುವುದರಿಂದಲೂ ಇಲ್ಲಿ ಜನಸಂಚಾರವೂ ವಿರಳವಾಗಿದೆ. ಈ ಎಲ್ಲಾ ಕಾರಣಗಳಿಂದ ಪ್ರಕೃತಿಯ ಮಡಿಲಿನಲ್ಲಿರುವ ಈ ದೇವಸ್ಥಾನ, ಅದರ ಕರಿಗಲ್ಲಿನ ಶಿವಲಿಂಗ, ಮುರಕಲ್ಲಿನ ಗರ್ಭಗುಡಿ, ಶಿಲಾ ತೀರ್ಥಮಂಟಪ, ಹಂಚಿನ ಮಾಡು ಸಂಪೂರ್ಣ ಶಿಥಿಲವಾಗಿದ್ದು ಜೀರ್ಣೋದ್ಧಾರವನ್ನು ನಿರೀಕ್ಷಿಸುತ್ತಿದೆ. ದೇವಸ್ಥಾನದ ಸ್ಥಳ ನಮ್ಮವರ ಅಧೀನದಲ್ಲಿದ್ದು ನಿತ್ಯಪೂಜೆ ನೆರವೇರುತ್ತಿದೆ. ಶಿವರಾತ್ರಿಯನ್ನು ಆಚರಿಸಲಾಗುತ್ತಿದೆ. ಹೆಚ್ಚಿನ ವಿವರಗಳಿಗಾಗಿ ಶ್ರೀ ರಾಮ್ ನಾರಾಯಣ ರಾವ್‌ರನ್ನು 9481846493ರಲ್ಲಿ ಸಂಪರ್ಕಿಸಿರಿ.

With Best Compliments From :

Ph : 98459 92859

**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.

# ಮಗಳು ಮತ್ತು ಮಲ್ಲಿಗೆ ಬಳ್ಳಿ

- ವೈ. ಮೋಹನ ರಾವ್

ಶ್ರೀ ಕೃಷ್ಣಯ್ಯ ಅನಂತಪುರ ಇವರ ಇನ್ನೊಂದು ಕವನ ಸಂಕಲನ "ಮಗಳು ಮತ್ತು ಮಲ್ಲಿಗೆ ಬಳ್ಳಿ". ಇದು ಇವರ ಇಡೀ ಕವನ ಸಂಕಲನ ಪುಸ್ತಕದ ಹೆಸರು. "ಮಗಳು ಮತ್ತು ಮಲ್ಲಿಗೆ ಬಳ್ಳಿ" ಇದಕ್ಕೆ ಸರಿಯಾಗಿ ಮಹಿಳೆ ಮತ್ತು ಮಲ್ಲಿಗೆ ಮುಖಪುಟ ಚಿತ್ತಾಕರ್ಷಕ ವಾಗಿದೆ. ಶ್ರೀ ಕೃಷ್ಣಯ್ಯ ಅನಂತಪುರ ಈ ಕವನ ಸಂಕಲನವನ್ನು "ಗುರುವಾಗಿ, ಸ್ನೇಹಿತನಾಗಿ, ಮಾರ್ಗದರ್ಶಕನಾಗಿ ನನ್ನ ಮೇಲೆ ಗಾಢ ಪ್ರಭಾವ ಬೀರಿದ ಅಣ್ಣ ಈಶ್ವರಯ್ಯನಿಗೆ ಪ್ರೀತಿಯಿಂದ ಅರ್ಪಿಸಿದ್ದಾರೆ.

ಈ "ಮಗಳು ಮತ್ತು ಮಲ್ಲಿಗೆ ಬಳ್ಳಿ" ಅವರ ಅಣ್ಣನಾದ ಈಶ್ವರಯ್ಯನವರಿಗೆ ಪ್ರೀತಿಯಿಂದ ಅರ್ಪಿಸಿದ ಕೃತಿಯ 'ನನ್ನ ಮಾತು'ನಲ್ಲಿ ಶ್ರೀ ಕೃಷ್ಣಯ್ಯ ಅನಂತಪುರ ಇವರ ಅಭಿಪ್ರಾಯ ತಿಳಿಸಿದರು–"ಇದು ನನ್ನ ಎರಡನೇ ಕವನ ಸಂಕಲನ. ಯಾವುದೇ ಪಂಥದ ಹಣೆಪಟ್ಟಿ ಕಟ್ಟಿಕೊಳ್ಳಬಾರದೆಂದು ತೀರ್ಮಾನಿಸಿ ನನಗೆ ಸರಿಯೆನಿಸಿದ ರೀತಿಯಲ್ಲಿ ಮೂವತ್ತೈದು ವರ್ಷಗಳಿಂದ ಕವಿತೆಗಳನ್ನು ಬರೆಯುತ್ತಾ ಬಂದಿದ್ದೇನೆ. ನಿರ್ದಿಷ್ಟ ಉದ್ದೇಶಗಳನ್ನಿರಿಸಿಕೊಂಡು ನಾನು ಬರೆದಿಲ್ಲ. ಸಂಸಾರ, ಸಮಾಜ, ಲೋಕದ ಆಗುಹೋಗುಗಳು ನನ್ನೊಳಗೆ ಉಂಟು ಮಾಡಿದ ಸ್ಪಂದನಗಳೇ ಕವಿತೆಗಳಾಗಿ ರೂಪು ತಳೆದಿವೆ. ನನ್ನ ಕವಿತೆಗಳು ನನಗೆ ಸಂಪೂರ್ಣ ತೃಪ್ತಿ ನೀಡಿಲ್ಲವಾದರೂ ಖಂಡಿತ ಸಂತೋಷವನ್ನು ನೀಡಿದೆ. ಅನೇಕ ಸಹೃದಯಿ ಮಿತ್ರರನ್ನು ಅವರ ಪ್ರೀತಿ, ವಿಶ್ವಾಸಗಳನ್ನು ಗಳಿಸಿಕೊಟ್ಟಿದೆ".

ಕೃತಿಯ 'ಮುನ್ನುಡಿ'ಯಲ್ಲಿ ಪ್ರಸಿದ್ಧ ಕವಿಗಳಾದ ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಇವರು ಹೀಗೆ ಹೇಳುತ್ತಾರೆ– 'ಶ್ರೀ ಕೃಷ್ಣಯ್ಯ ಆತುರ ಪಡದೆ, ಅವಸರಿಸದೆ, ಸಾವಧಾನವಾಗಿ ನಡೆಯುತ್ತಿದ್ದಾರೆ. ಸ್ವಲ್ಪ ನಿಧಾನವಾಯಿತೋ ಎನಿಸಿದರೂ ಚಿಂತೆಯಿಲ್ಲ. ಕಾವ್ಯ ಸೃಷ್ಟಿಯ ರೀತಿಯೇ ಹಾಗೆ. ಕೆಲವು ಸಲ ಕವಿ ಕವಿತೆಗಾಗಿ ಕಾಯಬೇಕಾಗುತ್ತದೆ. ಕೆ.ಎಸ್. ನರಸಿಂಹಸ್ವಾಮಿ ಎರಡು ಸಂಕಲನಗಳ ನಡುವೆ ಹದಿನಾರು ವರ್ಷ ಮೌನವಾಗಿದ್ದದ್ದುಂಟು! ಆದರೂ ಅವರ ಕಾವ್ಯ ಮಧ್ಯೆ ಧಾರೆಗಡಿದದ್ದಾಗಿ ಕಾಣುವುದಿಲ್ಲ. ಶ್ರೀ ಕೃಷ್ಣಯ್ಯನವರಿಗೆ ಈ ಸಮಾಧಾನವಂತೂ ಇದೆ. ಈ ಕವಿಯ 'ಮಗಳು ಮತ್ತು ಮಲ್ಲಿಗೆ ಬಳ್ಳಿ' ಎಂಬ ಎರಡನೆಯ ಸಂಕಲನದ ಹಡಗು ಈಗಷ್ಟೆ ದಡಕ್ಕೆ ಬಂದಿದೆ. ಅದರಲ್ಲಿ ಓದುಗರಿಗೆ ಪ್ರಿಯವಾಗುವ ಬೆಲೆಯುಳ್ಳ ಸರಕು ಇದೆ. ಸಂಗ್ರಹಕ್ಕೆ ಹೆಸರು ಕೊಟ್ಟ ಕವನವೇ ಸಂಕಲನದ ಅತ್ಯುತ್ತಮ ಕವಿತೆಯೂ ಆಗಿದೆ ಎನಿಸುತ್ತದೆ. ಇದಕ್ಕೆ ಕಾರಣ ಅದು ಪ್ರತೀಕಾತ್ಮಕ ಸೃಷ್ಟಿಯಾಗಿರುವುದು. ತಾನು ಪ್ರಕಟಿಸಲಿರುವ ಆಶಯವನ್ನು ನೇರ ಮಾತುಗಳಿಂದ ಮುಟ್ಟಿ ಹೇಳುವ ವಿಧಾನ ಕವಿತೆಯ ಚೆಲುವನ್ನು ಮಲಿನಗೊಳಿಸಿ ಬಿಡುತ್ತದೆ. ಪ್ರತೀಕಾತ್ಮಕ ಕವಿತೆಯ ರೀತಿ ಬೇರೆ. ಬೇರೊಂದು ಚಿತ್ರವನ್ನು ಪ್ರತೀಕವಾಗಿ ಬಳಸಿ ಅದನ್ನು ಧ್ವನಿಯ ನೆಲೆಗೇರಿಸುವ ಕೌಶಲ ಇಂಥ ಕವಿತೆಯಲ್ಲಿರುತ್ತದೆ".



ಕೃತಿ : 'ಮಗಳು ಮತ್ತು ಮಲ್ಲಿಗೆ ಬಳ್ಳಿ' ಲೇಖಕರು : **ಶ್ರೀ ಕೃಷ್ಣಯ್ಯ ಅನಂತಪುರ** ಪ್ರಕಾಶನ : **ಸಂತೋಷ ಪ್ರಕಾಶನ, ಕುಂಬಳೆ, ಕಾಸರಗೋಡು** ಬೆಲೆ : **ರೂ.65/-**

ಸಂಗ್ರಹಕ್ಕೆ ಹೆಸರುಕೊಟ್ಟ ಕವನವೇ 'ಮಗಳು ಮತ್ತು ಮಲ್ಲಿಗೆ ಬಳ್ಳಿ' ಸಂಕಲನದ ಅತ್ಯುತ್ತಮ ಕವಿತೆಯಾಗಿದೆ. ಮಗಳ ಆಕ್ಷೇಪಣೆಯೊಂದಕ್ಕೆ ತಂದೆ ಸಮಾಧಾನ ಹೇಳುವ ರೀತಿಯಲ್ಲಿ ಮಲ್ಲಿಗೆ ಬಳ್ಳಿಯ ರೂಪ ಪಡೆಯುತ್ತಾ ಹೋಗುತ್ತದೆ. ಈ ಕವಿತೆಯ ಕೆಲವು ಸಾಲುಗಳನ್ನು ಗಮನಿಸೋಣ. ಚಿತ್ರಕ್ಕೆ ಚೌಕಟ್ಟು, ಬೆಳೆಗೆ ಬೇಲಿ, ಮನೆಗೆ ಪಾಗಾರ, ಬಳ್ಳಿಗೆ ಚಪ್ಪರ ಹಾಕುವುದು ತಪ್ಪೆಂದು ಈಗ ಅನಿಸುತಿದೆಯೇ ಹೇಳು? ಎಂದಾಗ ಮಗಳು ಮುಗುಳ್ನಕ್ಕಳು.

ಬದುಕು ಹೇಗೆ ವಿಕೃತವಾಗಿರುತ್ತದೆ ಎನ್ನುವುದಕ್ಕೆ 'ಸ್ವಾಗತ ಗೀತೆ'ಯ ಕೆಲವು ಸಾಲುಗಳು ಉದಾಹರಣೆಯಾಗಿರುತ್ತದೆ. ಹಾಲಾಹಲ ಹರಿಸುವ ಕೆಚ್ಚಲುಗಳು, ಮೊಗು ಮುಚ್ಚಿಸುವ ಬಚ್ಚಲುಗಳು, ಕೋಗಿಲೆಗೆ ಕಾಗೆ ಕೊರಳು, ನಾಟ್ಯ ಮರೆತ ನವಿಲು, ಹುಡುಗಿಯಾದ ಹುಡುಗ, ಗಿಳಿಯಾದ ಗಿಡುಗ.

ಕುರುಕ್ಷೇತ್ರ–'ಈ ಕವನದ ಕೆಲವು ಸಾಲುಗಳು ಹೀಗಿವೆ–ಸಾಧುವಲ್ಲ ಸಹೋದರ ಮೇರೆ ಮೀರಿ, ಮೇಲೆರಗುವ ಭಂಡ ಕ್ಷಾತ್ರ, ತಾಳು, ತಾಳಿದವನಿಗಿಲ್ಲ ಗೋಳು, ಎಷ್ಟೆಂದರೂ ನೀನು ಒಡೆದ ಗಾಂಧಾರಿ ಗರ್ಭದ ಹೋಳು.

'ಕನಸುಗಳು ಬೇಕು' ಈ ಕವನ ನಮಗೆ ಏಕೆ ಕನಸುಗಳು ಬೇಕು ಎಂಬುದನ್ನು ತಿಳಿಸುತ್ತದೆ. ಭಾಗೀರಥಿಯ ಇಳಿಸಲು, ಸಾರಥ್ಯ ವಹಿಸಲು, ಬೆಳಕ ಬಿತ್ತಲು, ಕಾವ್ಯ ಕೆತ್ತಲು, ಕನಸುಗಳು ಬೇಕು.

'ಮಗಳು ಮತ್ತು ಮಲ್ಲಿಗೆ ಬಳ್ಳಿ' ಯ ಕವನಗಳು ನಮಗೆ ಮಾದರಿ ಕವನಗಳಾಗುತವೆ. ನಮ್ಮ ಹೃದಯಕ್ಕೆ ಹೆಚ್ಚು ಸಮೀಪ ಆಗುತ್ತವೆ. ಶ್ರೀ ಕೃಷ್ಣಯ್ಯ ಅನಂತಪುರ ಇವರಿಗೆ ಶುಭಾಶಯಗಳು.

# ಕೃಣ್ವಂತಃ ವಿಶ್ವಮ್ ಆರ್ಯಮ್


- ಸಿ.ಚೈತ್ರಾ

ಯೋಗ ವೇದೋಪನಿಷತ್ ವ್ಯಾಕರಣಾದಿ ಶಾಸ್ತ್ರಗಳು ಹಾಗೂ ಈ ದೇಶದ ಇನ್ನಿತರ ಜ್ಞಾನಶಾಖೆಗಳು ಇಂದು ವಿಶ್ವದ ಗಮನ ಸೆಳೆಯುತ್ತಿವೆ. ಈ ದೇಶದ ಜ್ಞಾನಮಾರ್ಗಗಳಲ್ಲಿ ಸಾಧನೆ ಮಾಡಿದ ಸಾಧಕರು ಇಂದು ವಿಶ್ವದ ಗಮನಸೆಳೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಾಧನೆಯ ಮಾರ್ಗದಲ್ಲಿ ಮುನ್ನಡೆಯುತ್ತಿರುವ ನೂರಾರು ಯುವಕರಲ್ಲಿ ಒಂದು ಹೆಸರು ಡಾ| ತಿಲಕ ಎಮ್ ರಾವ್.

ಇಂದು ಡಾ| ತಿಲಕ ಎಮ್. ರಾವ್ ಕಬ್ಬಿಣದ ಕಡಲೆಯಾದ ಅಷ್ಟಾಧ್ಯಾಯೀ ವ್ಯಾಕರಣವನ್ನು ಸುಲಭ ಹಸಿ ಕಡಲೆಯಾಗಿಸಿ ಸಂಸ್ಕೃತ ವ್ಯಾಕರಣಾಸಕ್ತರಿಗೆ ಇತ್ತಿದ್ದಾರೆ. ಅಷ್ಟಾಧ್ಯಾಯೀ ಪ್ರವೇಶ ಭಾಗ–1 ಹಾಗೂ ಭಾಗ–2ರಲ್ಲಿ ಸಂಸ್ಕೃತ ವ್ಯಾಕರಣಾಸಕರಿಗೆ ಸುಲಭದಲ್ಲಿ ವ್ಯಾಕರಣ ಮನದಟ್ಟಾಗುವ ರೀತಿಯಲ್ಲಿ ಉದಾಹರಣೆಯೊಂದಿಗೆ ಜೋಡಿಸಿ ಸಂಸ್ಕೃತದಲ್ಲಿ ಪುಸ್ತಕರಚನೆ ಮಾಡಿದ್ದಾರೆ. ದೆಹಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಉಪಕುಲಪತಿಗಳಿಂದ ಬಿಡುಗಡೆಗೊಂಡಿರುವ ಈ ವ್ಯಾಕರಣ ಕಲಿಕಾಪುಸ್ತಕ ದೇಶದ ಮತ್ತು ವಿದೇಶದ ನಾನಾ ದಿಕ್ಕುಗಳಲ್ಲಿರುವ ವ್ಯಾಕರಣಾಸಕ್ತರಿಂದ ಪ್ರಶಂಸಿತಗೊಂಡಿದೆ. ಅಂತರ್ಜಾಲದ ಮೂಲಕ ಇವರು ನಡೆಸುತ್ತಿರುವ ಅಷ್ಟಾಧ್ಯಾಯೀಪಾಠಕ್ಕೆ 500ಕ್ಕೂ ಹೆಚ್ಚು ಜನ ಜಗತ್ತಿನ ವಿವಿಧ ದೇಶದ ವ್ಯಾಕರಣಾಸಕ್ತರು ಉಪನ್ಯಾಸಕರು ನೋಂದಾಯಿಸಿಕೊಂಡಿದ್ದಾರೆ.

ಇತ್ತೀಚೆಗೆ ಐರ್ಲಾಂಡ್ ದೇಶದಲ್ಲಿ ಇವರ ನೇತೃತ್ವದಲ್ಲಿ ನಡೆದ ಸಂಸ್ಕೃತಸಪ್ತಾಹಕ್ಕೆ ಅಮೇರಿಕ ಇಂಗ್ಲೆಂಡ್ ನೆದರ್ಲಾಂಡ್ ಮತ್ತು ಐರ್ಲಾಂಡ್ ದೇಶದ, ಅನೇಕ ವರ್ಷಗಳಿಂದ ಸಂಸ್ಕೃತ ಅಧ್ಯಯನ ನಡೆಸುತ್ತಿರುವ 30ಕ್ಕೂ ಅಧಿಕ ಪಾಶ್ಚಾತ್ಯರು ಪಾಲ್ಗೊಂಡಿದ್ದು ಗಮನಾರ್ಹವಾಗಿದೆ. ಇವರ ದಕ್ಷಿಣ ಕೊರಿಯ ದೇಶದ ವಿದ್ಯಾರ್ಥಿ, ವ್ಯಾಕರಣಾಧ್ಯಯನದಲ್ಲಿ ಈ ಗ್ರಂಥದ ಉಪಯುಕ್ತತೆಯನ್ನು ಮನಗೊಂಡು ಕೊರಿಯ ಭಾಷಾನುವಾದದಲ್ಲಿ ತೊಡಗಿದ್ದಾನೆ.

ಬೆಂಗಳೂರು ಚನ್ನೇನಹಳ್ಳಿಯ ವೇದವಿಜ್ಞಾನಶೋಧಸಂಸ್ಥಾನ ಈ ಪುಸ್ತಕದ ಪ್ರಕಾಶಕರಾಗಿದ್ದು, ಡಾ. ತಿಲಕ ಎಮ್.ರಾವ್ ಅವರು ಈ ಕೇಂದ್ರದ ಸಹನಿರ್ದೇಶಕರಾಗಿದ್ದರು. ಈಗ ಪುಣೆಯ MIT ADT ವಿಶ್ವವಿದ್ಯಾಲಯದ MIT School of Vedic Sciences ವಿಭಾಗದಲ್ಲಿ ಸಂಸ್ಕೃತಭಾಷಾ ಉಪನ್ಯಾಸಕರು ಹಾಗೂ ಸಂಶೋಧಕರಾಗಿದ್ದಾರೆ. ಬೆಂಗಳೂರಿನಲ್ಲಿ ಇದ್ದಾಗ ಡಾ. ತಿಲಕ ಎಮ್.ರಾವ್ ಕೊಡಿಗೆಹಳ್ಳಿಯ ಜ್ಞಾನಶಕ್ತಿ ದೇಗುಲದ ಪೂಜಾ ಸಮಿತಿಯಲ್ಲಿದ್ದರು.




ಪುಸ್ತಕ ಲಭ್ಯವಿರುವ ಸ್ಥಳ : **ವೇದವಿಜ್ಞಾನ ಶೋಧ ಸಂಸ್ಥಾನಂ ಜನಸೇವಾ ಪ್ರಿಮೈಸಿಸ್, ಚೆನ್ನೇನಹಳ್ಳಿ, ಮಾಗಡಿ ರಸ್ತೆ, ಬೆಂಗಳೂರು-130. ಫೋನ್ : 080-64508816**

## ಸಿತ್ಲ ರಂಗನಾಥರಾವ್‌ರ ಪುಸ್ತಕ ಬಿಡುಗಡೆ



ಯಕ್ಷರಂಗ ಕಟೀಲು ಸಿತ್ಲ ಫೌಂಡೇಶನ್(ರಿ) ಉಡುಪಿ ಹಾಗೂ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಮಾಹೆ ಇದರ ಆಶ್ರಯದಲ್ಲಿ ಕಟೀಲು ಸಿತ್ಲ ರಂಗನಾಥರಾವ್ ನಿರೂಪಿತ "ರಂಗವಿಚಿಕ್ಷತೆ" ಎಂಬ ಕೃತಿಯ ಲೋಕಾರ್ಪಣಾ ಕಾರ್ಯಕ್ರಮವು ತಾ.23.06.2018 ರಂದು ಎಂಜಿ.ಎಂ ಕಾಲೆಜಿನ ಧ್ವನ್ಯಾಲೋಕ ದಲ್ಲಿ ನೆರವೇರಿತು. ಶ್ರೀ ಎ ಈಶ್ವರಯ್ಯ ಪುಸ್ತಕ ಬಿಡುಗಡೆ ಮಾಡಿದರು. ಪ್ರೊ| ವರದೇಶ್ ಹಿರೇಗಂಗೆ ಕೃತಿ ವಿಮರ್ಷೆ ಮಾಡಿದರು ಡಾ.ಕೆ ಎಂ ರಾಘವ ನಂಬಿಯಾರ್ ಉಪಸ್ಥಿತರಿದ್ದರು

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

*With Best Complimemts From*
SRI M. SHAILESH RAO Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**




SAMPATH KUMAR Mobile : 9741508881
**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

## ಶುಭ ವಿವಾಹ

ಬೆಳ್ಳೆ ಶ್ರೀ ಶ್ರೀಧರರಾವ್ ಮತ್ತು ಶ್ರೀಮತಿ ನಾಗಲಕ್ಷ್ಮಿ ರವರ ಪುತ್ರಿ **ಚಿ। ಸೌ। ಶ್ವೇತಾ** ಹಾಗೂ ಬೆಳ್ಳರ್ಪಾಡಿ ಶ್ರೀ ಪದ್ಮನಾಭರಾವ್ ಮತ್ತು ಶ್ರೀಮತಿ ಕೃಷ್ಣವೇಣಿ ಇವರ ಪುತ್ರ **ಚಿ। ರಾಕೇಶ್** ಇವರ ವಿವಾಹವು ಎರ್ಮಾಳು ಶ್ರೀ ಜನಾರ್ಧನ ಜನಕಲ್ಯಾಣ ಮಂಟಪದಲ್ಲಿ ತಾ.17-06-2018ರಂದು ನೆರವೇರಿತು.

★★★★ ★★★★

ಹೆಜಮಾಡಿ ಶ್ರೀ ವಸಂತಕುಮಾರ್ ಮತ್ತು ಶ್ರೀಮತಿ ಶಶಿಪ್ರಭಾರ ಪುತ್ರಿ **ಚಿ। ಸೌ। ಶ್ರೀ ರಕ್ಷಾ** ಹಾಗೂ ಸುಳ್ಕೇರಿ ಶ್ರೀ ಸುಂದರರಾವ್ ಮತ್ತು ಶ್ರೀಮತಿ ಯಮುನಾವತಿ ಇವರ ಪುತ್ರ **ಚಿ। ರಾಜೇಶ್** ಇವರ ವಿವಾಹವು ಪಾವಂಜೆ ಜ್ಞಾನಶಕ್ತಿ ದೇವಸ್ಥಾನದ ಸಭಾಂಗಣದಲ್ಲಿ ತಾ.18-06-2018ರಂದು ನೆರವೇರಿತು.

★★★★ ★★★★

ಶ್ರೀಮತಿ ಮಾಲಿನಿ ಮತ್ತು ಗಿರೀಶ್ ಕುಮಾರ್ ಇವರ ಸುಪುತ್ರ **ಚಿ। ಕೆ. ಯಜ್ಞೇಶ್ ಕುಮಾರ್** ಮತ್ತು ಎಲ್ಲೂರು ಶ್ರೀಮತಿ ಹೇಮಪ್ರಭಾ ಮತ್ತು ಶ್ರೀ ಶರದ್ ಶ್ಯಾನ್‌ಭೋಗ್ ಇವರ ಸುಪುತ್ರಿ **ಚಿ। ಸೌ। ಶ್ರದ್ಧಾ** ಇವರ ವಿವಾಹ ಸಮಾರಂಭವು ಬಂಟ್ವಾಳದಲ್ಲಿರುವ 'ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪ' ದಲ್ಲಿ ತಾ.22-6-2018ರ ಶುಕ್ರವಾರ ದಂದು ಜರುಗಿತು.

## ಗೃಹಪ್ರವೇಶ

ಶ್ರೀಮತಿ ಮತ್ತು ಶ್ರೀ ಕೃಷ್ಣರಾವ್.ಬಿ, ಚಿಕ್ಕಮಗಳೂರು ಇವರ ಪುತ್ರ ಶಿವಕುಮಾರ ಇವರು ಕರಿಯಂಗಳ ಗ್ರಾಮ ರಾಮಲಿಬೆಟ್ಟು ಎಂಬಲ್ಲಿ ನಿರ್ಮಿಸಿದ ನೂತನ ನಿವಾಸ ಸುರಭಿ ಇದರ ಗೃಹಪ್ರವೇಶ ಸಮಾರಂಭವನ್ನು ತಾ.20-06-2018ರಂದು ನೆರವೇರಿಸಿದರು

## ಬ್ರಹ್ಮೋಪದೇಶ

ಶ್ರೀಮತಿ ವೇದಾವತಿ ಮತ್ತು ಶ್ರೀಮ.ನಾ.ಹೆಬ್ಬಾರ್‌ರ ಪೌತ್ರ, ಶ್ರೀಮತಿ ಛಾಯಾ ಮತ್ತು ಶ್ರೀ ಸುದೀಪ್ ಹೆಬ್ಬಾರ ಪುತ್ರ **ಚಿ। ಸುಮಿತ್**‌ನ ಬ್ರಹ್ಮೋಪದೇಶ ಸಮಾರಂಭವು ತಾ.17.06.2018 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾಮಂಟಪದಲ್ಲಿ ನೆರವೇರಿತು.

★★★★ ★★★★

ಮುಂಬಯಿ ಮುಲುಂಡ್‌ನ ಶ್ರೀ ಪ್ರಸಾದ ಅಧಿಕಾರಿ ಮತ್ತು ಶ್ರೀಮತಿ ಚಾರುಲತಾ ಇವರ ಪುತ್ರರಾದ **ಚಿ। ಮಿಹಿರ್ ಮತ್ತು ಚಿ। ಸುವಿರ್** ಇವರ ಬ್ರಹ್ಮೋಪದೇಶ ಸಮಾರಂಭವು ತಾ.17.06.2018 ರಂದು ಮುಲುಂಡ್‌ನ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ನೆರವೇರಿತು.


★★★★ ★★★★

ಶ್ರೀ ಬೆಳ್ಮಣ್ ಹರಿಶ್ಚಂದ್ರ ರಾವ್ ಇವರ ಪೌತ್ರ, ಶ್ರೀಮತಿ ವಾಣಿ ಮತ್ತು ಶ್ರೀ ವಿಜಯ ರಾವ್ ಇವರ ಪುತ್ರ **ಚಿ। ಆಯುಷ್**‌ನ ಬ್ರಹ್ಮೋಪದೇಶ ಸಮಾರಂಭವು ತಾ.21.06.2018ರಂದು ಉಡುಪಿ ಚಿಟ್ಪಾಡಿಯ ಸರಸ್ವತಿ ಸಭಾಭವನದಲ್ಲಿ ನೆರವೇರಿತು.

★★★★ ★★★★

ಬೆಂಗಳೂರಿನ ಶ್ರೀ ಬಿ.ವಿ.ರಾವ್ ಮತ್ತು ಶ್ರೀಮತಿ ವಿದ್ಯಾ ರಾವ್‌ರವರ ಪೌತ್ರ, ಶ್ರೀ ಕಾರ್ತಿಕ್ ರಾವ್ ಬಪ್ಪನಾಡು ಹಾಗೂ ಶ್ರೀಮತಿ ಅಶ್ವಿನಿಯವರ ಪುತ್ರ **ಚಿ। ಪ್ರಣವ್**‌ನ ಬ್ರಹ್ಮೋಪದೇಶ ಸಮಾರಂಭವು 02.07.2018ರಂದು ಬೆಂಗಳೂರು ಕೋಡಿಗೆಹಳ್ಳಿ ಶ್ರೀ ಜ್ಞಾನಶಕ್ತಿ ಮಂಟಪದಲ್ಲಿ ನೆರವೇರಿತು.

## ಸಹಸ್ರಚಂದ್ರ ದರ್ಶನ ಶಾಂತಿ




ಪಾದೆಬೆಟ್ಟು ಶ್ರೀ ಗಣೇಶ ಶಾನುಭಾಗ್ ರವರು ತಮ್ಮ ಪತ್ನಿ ಶ್ರೀಮತಿ ಸುಶೀಲಾ ಶಾನುಭಾಗ್ ಮತ್ತು ಕುಟುಂಬಸ್ಥರೊಂದಿಗೆ ಸಹಸ್ರಚಂದ್ರದರ್ಶನ ಶಾಂತಿಯನ್ನು ಮೇ 7 ರಂದು ಪಡುಬಿದ್ರೆ ಬಾಲಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿಸಿದರು

## ನಿಧನ

### ನಿವೃತ್ತ ಶಿಕ್ಷಕ ಎನ್. ತ್ಯಾಗರಾಜ್

ವಿಟ್ಲ ಕಸಬಾ ಗ್ರಾಮದ ಕೊಡಂಗಾಯಿ ನೆಡ್ಯಾಳ ನಿವಾಸಿ, ವಿಟ್ಲದ ವಿಟ್ಠಲ ಪ್ರೌಢಶಾಲೆ ನಿವೃತ್ತ ಶಿಕ್ಷಕ ಎನ್. ತ್ಯಾಗರಾಜ್ (82) ಅವರು ಜೂ.17 ರಂದು ನಿಧನ ಹೊಂದಿದರು.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.




N. Laxmi Prasad



ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವರ ಪೀಠಕ್ಕೆ ಹಿತ್ತಾಳೆಯ ಹೊದಿಕೆ



ಸ್ಥಾನಿಕ ಸಂಘಟನೆಗಳು ಬಲಗೊಳ್ಳುತ್ತಿದ್ದಂತೇ ನಮ್ಮ ಸಮಾಜದ ಪುರಾತನ ದೇವಳಗಳೂ ಕೂಡಾ ಅಭಿವೃದ್ಧಿ ಪಥದತ್ತ ಸಾಗುತ್ತಿವೆ. ಅಂತಹ ದೇವಳಗಳಲ್ಲಿ ಒಂದು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ. ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಈ ದೇವಳಗಳಲ್ಲಿ ಭಕ್ತ ಮಹಾಶಯರ ಸಹಕಾರದಲ್ಲಿ ಪ್ರಧಾನ ದೇವರು ಶ್ರೀ ವಿಷ್ಣುಮೂರ್ತಿ ಹಾಗೂ ಉಪದೇವರುಗಳಾದ ಶ್ರೀ ಮಹಾಗಣಪತಿ ಹಾಗೂ ಶ್ರೀ ಶಾಸ್ತಾವು ಈ ಮೂರು ದೇವರುಗಳ ಪೀಠಗಳಿಗೆ ನರಸಿಂಹ ಜಯಂತಿಯ ಶುಭ-ಅವಸರದಲ್ಲಿ ಹಿತ್ತಾಳೆಯ ಹೊದಿಕೆಯನ್ನು ಅಳವಡಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಬಿ. ಜಯರಾಮ ರಾವ್ ಇವರು ದೇವಳದ ಅಭಿವೃದ್ಧಿಯು ಕ್ಷಿಪ್ರಗತಿಯಲ್ಲಿ ನಡೆಯುತ್ತಿದ್ದ ಸಮಾಜವು ಇದರಂತೆ ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು. ಅದೇ ಸಂದರ್ಭದಲ್ಲಿ ಆಕರ್ಷಕ ಗಡಿಯಾರವನ್ನು ದೇವಸ್ಥಾನಕ್ಕೆ ಕೊಡುಗೆಯಾಗಿ ನೀಡಿದ ಆಭರಣ ಜ್ಯುವೆಲ್ಲರ್ಸ್‌ನವರಿಗೂ ಧನ್ಯವಾದವಿತ್ತರು.

## ಅಭಿನಂದನೆಗಳು



### ಪ್ರಣೀತ್ ರಾವ್

ಪ್ರಶಾಂತ್ ರಾವ್ ಹಾಗೂ ಹರಿಣಾಕ್ಷಿ ರಾವ್ ವಾಮಂಜೂರು ಇವರ ಪುತ್ರ ಪ್ರಣೀತ್ ರಾವ್ 2017-18ನೇ ಸಾಲಿನ ಪಿ.ಯು.ಸಿ. ಪರೀಕ್ಷೆಯಲ್ಲಿ 569 (95%) ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣನಾಗಿರುತ್ತಾನೆ. ಇವನು ಆಳ್ವಾಸ್ ಪದವಿ ಪೂರ್ವ ಕಾಲೇಜು ಮೂಡಬಿದ್ರೆಯ ವಿದ್ಯಾರ್ಥಿಯಾಗಿರುತ್ತಾನೆ.

## ಶ್ರೀಮತಿ ಪುಷ್ಪಾವತಿ ಶ್ರೀನಿವಾಸರಾವ್ ಇವರಿಗೆ ಸನ್ಮಾನ



ದ.ಕನ್ನಡ ಜಿಲ್ಲಾ ಪಂಚಾಯತ್ ಸರಕಾರಿ (ಫಿಶರೀಸ್) ಹಿ. ಪ್ರಾ. ಶಾಲೆ ಕುಳಾಯಿಯಲ್ಲಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸರಾವ್ ಇವರು ಶಿಕ್ಷಕಿಯಾಗಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದರೂ ಸತತ ಮೂರನೇ ಬಾರಿ 2018-19 ರ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಮಕ್ಕಳಿಗೆ "ಉಚಿತ ನೋಟ್ ಪುಸ್ತಕ" ಕೊಡುಗೆ ವಿತರಣೆ ನೀಡಿದ ಸಂದರ್ಭದಲ್ಲಿ ಶಾಲಾ ಸುವರ್ಣ ಮಹೋತ್ಸವ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಸದಸ್ಯರು, ಶಿಕ್ಷಕರು ಎಲ್ಲಾ ಸೇರಿ ದಂಪತಿಗಳನ್ನು ಅಭಿನಂದಿಸಿ ಸನ್ಮಾನಿಸಿದರು.

## ಶುಭಜನನ

ಇಂದ್ರಾಳಿ ಶ್ರೀ ವೈ ಮುರಲೀಕೃಷ್ಣ ರಾವ್ ಮತ್ತು ಜಯಲಕ್ಷ್ಮಿ ದಂಪತಿಗಳ ಪುತ್ರ ಅನೂಪ್ ಹಾಗೂ ಹರ್ಷಿತಾ ದಂಪತಿಗಳಿಗೆ ತಾ.15-06-2018ರಂದು ಗಂಡು ಮಗುವಿನ ಜನನ.




ಎಮ್. ದೇವಾನಂದ್ ಭಟ್
Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿನ ಅಪೂರ್ವ ಅನುಭವಗಳು

–ಡಾ. ವೈ. ರವೀಂದ್ರನಾಥ ರಾವ್, ಬ್ರಹ್ಮಾವರ.

(ಹಿಂದಿನ ಸಂಚಿಕೆಯಿಂದ)

ನಮ್ಮ ಮರುದಿವಸದ ಕಾರ್ಯಕ್ರಮ ದುಬ್ಬಾ ಸಿಟಿಟೂರ್ ಆಗಿತ್ತು. ಇದನ್ನು ನಡೆಸಿಕೊಡಲು ಭಾರತೀಯ ಮೂಲದ, ಅಲ್ಲಿನ ಮಣಿಪಾಲ ವಿಶ್ವವಿದ್ಯಾನಿಲಯದ ಶಾಖೆಯಲ್ಲಿ ಶಿಕ್ಷಣ ಪಡೆದ, ಉತ್ತಮ ಇಂಗ್ಲಿಷ್ ಮಾತುಗಾರಿಕೆಯ ನೈಪುಣ್ಯ ಹೊಂದಿದ ಚೇತನ್ ಎನ್ನುವವರನ್ನು ನೇಮಿಸಲಾಗಿತ್ತು. ನಗರದ ಸುತ್ತಮುತ್ತಲಿನ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ಸುಂದರ ಕಮೆಂಟ್ರಿಯೊಂದಿಗೆ ಬಸ್ಸಿನಲ್ಲಿದ್ದೇ ನೋಡಿದೆವು. ಹಾಗೆಯೇ ಪ್ರಮುಖ ಸ್ಥಳಗಳಾದ ದುಬ್ಬಾ ವಸ್ತು ಸಂಗ್ರಾಹಲಯಕ್ಕೆ ನಮ್ಮನ್ನು ಕರೆದುಕೊಂಡು ಹೋಗಲಾಯಿತು. ದುಬ್ಬಾ ಮ್ಯೂಸಿಯಂನಲ್ಲಿ ಅರಬ್ಬರು ಪ್ರಾಚೀನ ಕಾಲದಲ್ಲಿ ಬದುಕಿದ್ದ ರೀತಿ, ಆಗಿನ ಮನೆಯ ರಚನೆ, ಮನೆಯೊಳಗಿನ ಸಾಮಾಗ್ರಿಗಳು, ಆ ಕಾಲದ ವ್ಯಾಪಾರಗಳು ಅವುಗಳ ವಿಕಾಸ, ಅರಬ್ಬರ ಸಾಂಪ್ರದಾಯಿಕ ನೃತ್ಯಗಳು, ಯುದ್ಧದ ಸಲಕರಣೆಗಳು, ಒಂಟೆ, ಗಿಡುಗಗಳೊಂದಿಗಿನ ಸಂಬಂಧ, ಮರುಭೂಮಿಯ ಚಿತ್ರಣ, ಆಗಿನ ಕಾಲದ ಉಡುಗೆ ತೊಡುಗೆಗಳನ್ನೆಲ್ಲಾ ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದರು ಮತ್ತು ಕೆಲವು ಫೋಟೋಗಳನ್ನು ಇಲೆಕ್ಟ್ರಾನಿಕ್ ರೂಪದಲ್ಲೂ ಪ್ರದರ್ಶಿಸಿಟ್ಟಿದ್ದರು. ಅಲ್ಲದೆ ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಸಂಬಂಧಿಸಿ ಉತ್ಪಾದಿಸಿದ ಕೆಲವು ಸಾಮಾಗ್ರಿಗಳನ್ನು ಇಲ್ಲಿ ಮಾರಾಟಕ್ಕೆ ಇಟ್ಟಿದ್ದರು.

ಇಲ್ಲಿನ ಇನ್ನೊಂದು ಪ್ರಸಿದ್ಧ ಪ್ರವಾಸಿ ತಾಣ ಸಮುದ್ರ ತೀರ–ಅರಬ್ಬೀ ಸಮುದ್ರ. ಈ ಬೀಚಿನ ವಿಶೇಷತೆ ಎಂದರೆ ಇಲ್ಲಿರುವ ವಿಶ್ವಪ್ರಸಿದ್ಧ ಅತ್ಯಂತ ದುಬಾರಿ ಬುರ್ಜ್ ಅಲ್ ಅರಬ್ ಜುಮೇರಾ ಸಪ್ತತಾರಾ ಹೋಟೇಲು. ಈ ಸುಂದರ ಹೋಟೇಲು ಸಮುದ್ರದ ಅಂಚಿನ ತೆರೆಗಳ ಮಧ್ಯೆ ಇರುವ ಒಂದು ಅದ್ಭುತ. ಈ ಬೀಚ್ ಬಹಳ ಸುಂದರ ಮತ್ತು ಸ್ವಚ್ಛವಾಗಿದೆ. ಹೋಟೇಲಿನ ಸಮೀಪದ ತಾಳೆ ಮತ್ತು ಖರ್ಜೂರಗಳ ಮರಗಳು ಈ ಪ್ರದೇಶವನ್ನು ಇನ್ನೂ ಚಂದಗೊಳಿಸಿದೆ. ಅದ್ಭುತಗಳ ನಗರವಾಗಿರುವ ದುಬ್ಬಾನ ಇನ್ನೊಂದು ಅದ್ಭುತ "ಬುರ್ಜ್ ಕಲೀಫಾ" ಕಟ್ಟಡ. ಇದು ಪ್ರಸ್ತುತ ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ 124 ಮಾಳಿಗೆಗಳ ಕಟ್ಟಡವಾಗಿದೆ. 31400 ಮೆಟ್ರಿಕ್ ಟನ್ ಸ್ಟೀಲ್ ರೀಬಾರ್‌ಗಳನ್ನು ಈ ಗೋಪುರದ ನಿರ್ಮಾಣಕ್ಕಾಗಿ ಬಳಸಲಾಗಿತ್ತು. ಇದು 2716.5 ಅಡಿ ಎತ್ತರದ ಗೋಪುರವಾಗಿದೆ. 124 ಮಾಳಿಗೆವರೆಗೆ ಕೆಲವೇ ಸೆಕೆಂಡುಗಳಲ್ಲಿ ತಲುಪುವ ಲಿಫ್ಟ್ ವ್ಯವಸ್ಥೆ ಇದ್ದು ಕೊನೆಯ 125ನೇ ಮಾಳಿಗೆಗೆ ಅಗತ್ಯವಿದ್ದರೆ ಕಾಲ್ನಡಿಗೆಯಲ್ಲಿಯೇ ಹೋಗಬೇಕು. ಈ ಕಟ್ಟಡವು ಪ್ರಪಂಚದಲ್ಲಿಯೇ ಅತೀ ದೊಡ್ಡದಾದ ಮೋಲ್ (ವ್ಯಾಪಾರ ಮಳಿಗೆ) ಸಮುಚ್ಚಯದೊಳಗೆ ಇದೆ. 124ನೇ ಮಾಳಿಗೆಯಿಂದ ದುಬ್ಬಾನ ಸುಂದರ ನಗರವನ್ನು ವಿಭಿನ್ನವಾಗಿ ವೀಕ್ಷಿಸಬಹುದು.

ದುಬ್ಬಾ ಅಥವಾ ಕೊಲ್ಲಿ ರಾಷ್ಟ್ರಗಳಲ್ಲಿ ನೋಡಬೇಕಾಗಿರುವ ಪ್ರೇಕ್ಷಣೀಯ ಸ್ಥಳವೆಂದರೆ ಇಲ್ಲಿನ ಮರುಭೂಮಿ. ಡಸರ್ಟ್ ಸಫಾರಿ ಇಲ್ಲಿನ ಒಂದು ವಿಶೇಷ ಆಕರ್ಷಣೆ. ದುಬ್ಬಾ ನಗರದಿಂದ ಸುಮಾರು 80 ಕಿ.ಮೀ. ದೂರವಿದ್ದು ಸಾಧಾರಣ 1 ಗಂಟೆಯ ಪ್ರಯಾಣವಿದೆ. ಮರುಭೂಮಿಯಲ್ಲಿ ಎತ್ತರ ತಗ್ಗು ಪ್ರದೇಶಗಳಲ್ಲಿ ಸುತ್ತಾಡಲು, ಈ ಕ್ರೀಡೆಗಾಗಿಯೇ ಇರುವ "ಲ್ಯಾಂಡ್ ಕ್ರೂಸರ್" ಕಾರಿನಲ್ಲಿಯೇ ನಮ್ಮನ್ನು ದುಬ್ಬಾಯಿಂದ ಕರೆತರಲಾಗಿತ್ತು. ಆದರೆ ಮರುಭೂಮಿಯ ಕ್ರೀಡೆಗಾಗಿ ಕಾರಿನ ಟ್ಯೂಬಿನ ಗಾಳಿಯ ಒತ್ತಡವನ್ನು ಒಂದು ನಿಗದಿತ ಪ್ರಮಾಣಕ್ಕೆ ಕಡಿಮೆಗೊಳಿಸಬೇಕು. ಇಲ್ಲವಾದರೆ ಮರುಭೂಮಿಯ ಮರಳುಗಾಡಿನ ಚಲನೆಯ ವೇಗಕ್ಕೆ ಹಿಡಿತ ಮತ್ತು ನಿಯಂತ್ರಣ ತಪ್ಪಿಹೋಗಬಹುದು. ಇದೊಂದು ಮರುಭೂಮಿಯ ಸಾಹಸ ಕ್ರೀಡೆಯಾದುದರಿಂದ, ಮುಂಚಿತವಾಗಿಯೇ ನಮ್ಮ ಮಧ್ಯಾಹ್ನದ ಊಟವನ್ನು ಮಿತವಾಗಿಯೇ ಸೇವಿಸಲು ಸೂಚಿಸಿದ್ದರು.

ಮಧ್ಯೆ ಕಾರಿನಿಂದ ಇಳಿದು ಸುಂದರವಾದ ಸೂರ್ಯಾಸ್ತವನ್ನೂ ವೀಕ್ಷಿಸಲು ಅವಕಾಶ ಮಾಡಿಕೊಟ್ಟಿದ್ದರು. ಆದರೆ ಮರುಭೂಮಿಯಲ್ಲಿನ ರಭಸದಿಂದ ಬೀಸುವ ಗಾಳಿಯಿಂದಾಗಿ ಸೂರ್ಯಾಸ್ತಮಯದ ಆನಂದವನ್ನು ಅನುಭವಿಸುವ ಜೊತೆಗೆ ಅತಿಯಾದ ಗಾಳಿಯಿಂದಾಗಿ ಮತ್ತು ಮರುಭೂಮಿಯ ಮರಳಿನಿಂದಾಗಿ ನಮ್ಮ ಕಣ್ಣುಗಳನ್ನು ರಕ್ಷಿಸಿಕೊಳ್ಳುವ ಜಾಗೃತಿ ಮತ್ತು ಅರಿವು ಕೂಡ ಇರಬೇಕಾಗುತ್ತದೆ. ಡಸರ್ಟ್ ಸಫಾರಿಗಾಗಿ ಪ್ರವಾಸಿಗರಿಗೆ ಇಲ್ಲಿ ಕಾರುಗಳಲ್ಲದೆ ದ್ವಿಚಕ್ರ ವಾಹನಗಳು ತೆರೆದವಾಹನಗಳು ಲಭ್ಯವಿರುತ್ತದೆ. ಈ ಡಸರ್ಟ್ ಸಫಾರಿಯಲ್ಲಿನ ಕ್ರೀಡೆ ಮುಗಿಯುತ್ತಿದ್ದಂತೆ, ನಾವು ರಾತ್ರಿಯ



ಊಟಕ್ಕೆ ಮರುಭೂಮಿಯ ಮಧ್ಯೆ ಇರುವಂತಹ ಒಂದು ಹೊರಾಂಗಣ ಹೋಟೇಲಿಗೆ ಬಂದೆವು. ಇದನ್ನು "ಬಿಬಿಕ್ಯೂ ಡಿನ್ನರ್" ಎಂದು ಕರೆಯಲಾಗಿದೆ. ಬಿಬಿಕ್ಯೂ ಎಂಬುವುದು ಸ್ಪಾನಿಷ್ ಭಾಷೆಯ "ಬಾರ್‌ಬೆಕ್ಯೂ" (Barbecue/Barbeque) ಪದದ ಸಂಕ್ಷಿಪ್ತ ರೂಪ. ಇದರ ಮೂಲ ಅರ್ಥ ಹೊರಾಂಗಣ ಉಪಾಹಾರಕ್ಕಾಗಿ ಒಂದು ಜಾತಿಯ ಮರದ ವೇದಿಕೆಯಲ್ಲಿ ಮಸಿ ಇತ್ಯಾದಿಗಳನ್ನು ಬಳಸಿ ನಿಧಾನಗತಿಯಲ್ಲಿ ಬೇಯಿಸುವ ಒಂದು ಕ್ರಮವಾಗಿದೆ. ಇಲ್ಲಿ ರೆಸ್ಟೋರೆಂಟ್‌ನ ಮಧ್ಯೆ ನೃತ್ಯಕ್ಕಾಗಿ ವಿಶಾಲವಾದ ಒಂದು ವೇದಿಕೆ ಇದ್ದು, ರಷ್ಯನ್ ವಿದೇಶಿ ನೃತ್ಯಗಾತಿಕೆಯಿಂದ ಉದರ ನೃತ್ಯ (Belley Dance) ಹಾಗೆಯೇ ಸ್ಥಳೀಯ ಅರಬ್ಬಿ ಪುರುಷ ನೃತ್ಯಗಾರನ ಬೆಂಕಿನೃತ್ಯ, "ತನೂರ" ನೃತ್ಯಗಳನ್ನು ಪ್ರದರ್ಶಿಸಲಾಗಿತ್ತು. ವಿಶೇಷವೆಂದರೆ ರಷ್ಯನ್ ವಿದೇಶಿ ನೃತ್ಯಗಾತಿಕೆಯ ನಾಟ್ಯಕ್ಕೆ ಹಾಗೂ ನೃತ್ಯಕ್ಕೆ ಹೊಂದುವ ಭಾರತೀಯ ಹಳೆಯ ಸಿನಿಮಾ ಸಂಗೀತವನ್ನು ಅಳವಡಿಸಲಾಗಿತ್ತು. ಈ ಎಲ್ಲಾ ನೃತ್ಯ ಕಾರ್ಯಕ್ರಮಗಳ ಮಧ್ಯೆ ಒಂಟೆ ಸವಾರಿ (Camel Raid)ಗೂ ಅವಕಾಶವಿತ್ತು. ಊಟದ ಬಳಿಕ ನಾವೆಲ್ಲರೂ ರಾತ್ರಿ ದುಬ್ಬಾಯ ನಮ್ಮ ರೂಮ್ ಸೇರಿದೆವು.

(ಮುಂದುವರಿಯುವುದು...)

## ನಂದಳಿಕೆ ಪದ್ಮನಾಭರಾವ್, ಬೆಂಗಳೂರು ವಿರಚಿತ ಗ್ರಂಥಗಳ ಅರ್ಪಣಾ ಕಾರ್ಯಕ್ರಮ



ನಂದಳಿಕೆ ಶ್ರೀ ಮಹಾಲಿಂಗೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶ್ರೀ ಮತ್ತು ಶ್ರೀಮತಿ ದಿ| ಗುಲಾಬಿರಾಮರಾವ್ ಸ್ಮೃತಿ ಸಂಗಮ ಟ್ರಸ್ಟ್ ಸಭಾಂಗಣದಲ್ಲಿ ಅದೊಂದು ಅಪೂರ್ವ ಕಾರ್ಯಕ್ರಮ ನಿಯೋಜಿಸಲಾಗಿತ್ತು. ಶ್ರೀ ಎಸ್. ಸುಹಾಸ ಹೆಗ್ಡೆ, ಧರ್ಮದರ್ಶಿ ಮಹಾಲಿಂಗೇಶ್ವರ ದೇವಸ್ಥಾನ, ನಂದಳಿಕೆಯವರ ಅಧ್ಯಕ್ಷತೆಯಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಎಸ್. ಪಡಶೆಟ್ಟಿ, ಹಾಸ್ಯ ಸಾಹಿತಿ, ಸಂಪಾದಕರು 'ಹಾಸ್ಯ ದರ್ಶನ' ಮಾಸ ಪತ್ರಿಕೆ, ಬೆಂಗಳೂರು; ಶ್ರೀ ಶ್ರೀನಿವಾಸ ಕುಂಡಂತಾಯ; ಸೃಜನಶೀಲ ಹಾಸ್ಯ ಲೇಖಕರು, ಬೆಂಗಳೂರು; ಕು.ಗೋ. ನಾಮಾಂಕಿತ ಶ್ರೀಗೋಪಾಲಕೃಷ್ಣ ಭಟ್; ಹಾಸ್ಯ ಸಾಹಿತಿ, ಉಡುಪಿ; ಶ್ರೀ ಜಿ.ಕೆ. ಕೋಲ್ಸೆ, ವಿಶ್ರಾಂತ ಹಿರಿಯ ವ್ಯವಸ್ಥಾಪಕರು, ಕೆನರಾಬ್ಯಾಂಕ್, ಹಾಗೂ ಲೇಖಕರು, ಉಡುಪಿ; ಶ್ರೀ ಎನ್. ಬಾಲಚಂದ್ರರಾವ್, ನಿವೃತ್ತ ಅಧಿಕಾರಿ, ಕರ್ನಾಟಕ ಬ್ಯಾಂಕ್ ಹಾಗೂ ಮಾಜಿ ಅಧ್ಯಕ್ಷರು, ಕವಿ ಮುದ್ದಣ ಮಿತ್ರ ಮಂಡಳಿ. ನಂದಳಿಕೆ ಮತ್ತು ಶ್ರೀ ಎನ್. ಸುಂದರರಾಮ ಬಂಗೇರ, ವಿಶ್ರಾಂತ ಮುಖ್ಯೋಪಾಧ್ಯಾಯರು. ಮಾದರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ನಂದಳಿಕೆ. ಇವರೆಲ್ಲಾ ಪಾಲ್ಗೊಂಡ ಈ ಕಾರ್ಯಕ್ರಮ ನಿಯೋಜಿಸಿದವರು ನಮ್ಮವರೇ ಆದ ದಿ| ನಂದಳಿಕೆ ಬಡಗುಮನೆ ರಾಮರಾವ್ ಮತ್ತು ದಿ| ಗುಲಾಬಿರಾಮರಾವ್ ರವರ ಸುಪುತ್ರ ಶ್ರೀ. ಎನ್. ಪದ್ಮನಾಭ ರಾವ್, ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ, ಬೆಂಗಳೂರು. ಸಂದರ್ಭ : ತಾವು ರಚಿಸಿದ ಪುಸ್ತಕಗಳಾದ 1) ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಮತ್ತು ಗ್ರಂಥ ಸುಭಾಷಿತಗಳು 2) ನೆನಪಿನಂಗಳದಿಂದ ನಮ್ಮ ಗುರು, ಎಂಬ ಕೃತಿಗಳು ಬಿಡುಗಡೆಗೊಂಡ ಉದ್ದೇಶ ಹಾಗೂ ಅದರ ಬಗ್ಗೆ ಅತಿಥಿ–ಅಭ್ಯಾಗತರ ಅಭಿಪ್ರಾಯ ಕ್ರೋಢಿಕರಣ.

ಸಭಾಕಾರ್ಯಕ್ರಮದ ಮೊದಲು ಹಾಸ್ಯ ಲೇಖಕರಿಂದ, ಹಾಸ್ಯ, ಸುಗಮ ಸಂಗೀತ ಹಾಗೂ ಮನರಂಜನೆ ನಡೆಯಿತು. ಪ್ರಾರ್ಥನೆ, ದೀಪಪ್ರಜ್ವಲನ ನಂತರ ನಡೆದ ಸಭಾಕಾರ್ಯಕ್ರಮದಲ್ಲಿ, ಅತಿಥಿಗಳು ಲೇಖಕರ ಕ್ರಮವನ್ನು ಅಭಿನಂದಿಸುತ್ತಾ, ಈ ಪುಸ್ತಕಗಳು ಎಲ್ಲರಿಗೂ ಮುಖ್ಯವಾಗಿ ಶಾಲಾ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿ ಹಾಗೂ ಶ್ರೀ ಪದ್ಮನಾಭರಾಯರು ಮುಂದಕ್ಕೂ ಬರವಣಿಗೆಯನ್ನು ನಿಲ್ಲಿಸದೆ ಸಾಹಿತ್ಯ ಸೇವೆ ಮಾಡಿ ತಮ್ಮ ಜೀವನದಲ್ಲೂ ಸಾರ್ಥಕತೆಯನ್ನು ಪಡೆಯಲಿ ಎಂದು ಹಾರೈಸಿದರು. ಪ್ರಸಕ್ತ ಕವಿ ಮುದ್ದಣ ಮಿತ್ರ ಮಂಡಳಿ, ನಂದಳಿಕೆಯ ಅಧ್ಯಕ್ಷರು ಹಾಗೂ ಸಭಾಧ್ಯಕ್ಷರಾದ ಸುಹಾಸಹೆಗ್ಡೆಯವರು ಸಭಾಂಗಣದ ಎದುರಿನ ಕೋಣೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಹಾಗೂ ಮಾಹಿತಿಯ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ, ಸಮಯೋಚಿತವಾಗಿ ಮಾತನಾಡಿ ರಾಯರನ್ನು ಅಭಿನಂದಿಸಿದರು. ಶ್ರೀ ಪದ್ಮನಾಭರಾಯರು ಅಧ್ಯಕ್ಷರಿಗೆ ಹಾಗೂ ಅತಿಥಿಗಳಿಗೆ ಶಾಲು ಹೊದಿಸಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ, ಶಾಲೆಯ ವತಿಯಿಂದ, ಅತಿಥಿಗಳ ಮುಖೇನ ವಿವಿಧ ಕಾರ್ಯಕ್ರಮದಡಿ ಬಹುಮಾನ ವಿತರಣೆಗೈಯಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಶ್ರೀ ಪದ್ಮನಾಭ ರಾಯರು ಶಾಲಾಮಕ್ಕಳಿಗೆ ಹಾಗೂ ಆಹ್ವಾನಿತರಿಗೆಲ್ಲಾ ಸುಗ್ರಾಹ ಭೋಜನ ಏರ್ಪಡಿಸಿದ್ದರು.

## ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ರಮಗಳ ವರದಿ

ನಮ್ಮ ಸಮಾಜಬಾಂಧವರಿಂದ ಪ್ರತಿಷ್ಠಾಪಿಸಿ, ಪೂಜಿಸಿ, ಆಡಳಿತ ನಡೆಸುತ್ತಿರುವ ರಾಷ್ಟ್ರೀಯ ಹೆದ್ದಾರಿ ಮತ್ತು ಕಾರ್ಕಳ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನವು ಹಲವು ಅಭಿವೃದ್ಧಿಯನ್ನು ಹೊಂದುತ್ತಾ ಇದೆ. ಶ್ರೀಕ್ಷೇತ್ರದ ದಕ್ಷಿಣ ಭಾಗದಲ್ಲಿ 'ಶ್ರೀ ಭಾರತೀ ಮಂಟಪ ಉದಯಾದ್ರಿ' ಎಂಬ ಹಾಲ್‌ನ್ನು ನಿರ್ಮಿಸಿದ್ದು, ಇದನ್ನು ನಿರ್ಮಿಸುವಲ್ಲಿ ಟ್ರಸ್ಟ್‌ನ ಸದಸ್ಯರಾದ ಶ್ರೀ ಸುದರ್ಶನ ರಾವ್ ಇನ್ನ, ಇವರ ಪರಿಶ್ರಮವು ಮಹತ್ವದ್ದಾಗಿದೆ. ಈ ಹಾಲ್‌ಗೆ ನಮ್ಮ ಸಮಾಜಬಾಂಧವರು, ಶ್ರೀ ಕ್ಷೇತ್ರ ಧರ್ಮಸ್ಥಳದವರು ದೇಣಿಗೆಯನ್ನು ನೀಡಿದ್ದು, ಈ ಹಾಲ್‌ನಲ್ಲಿ ಸಮಾಜಬಾಂಧವರ ಕಾರ್ಯಕ್ರಮಗಳಲ್ಲದೆ, ಊರಿನವರ ಕಾರ್ಯಕ್ರಮಗಳು ಜರಗುತ್ತಿದೆ. ಈ ಹಾಲ್‌ನ್ನು ಕಡಿಮೆ ಬಾಡಿಗೆಯಲ್ಲಿ ನೀಡಲಾಗುತ್ತಿದೆ. ಶ್ರೀಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಹೆಚ್ಚಿನ ಸ್ಥಳಾವಕಾಶದ ಅವಶ್ಯಕತೆಯು ಇದ್ದು, ಇದಕ್ಕೆ ಪೂರಕವಾಗಿ ಶ್ರೀಕ್ಷೇತ್ರದ ಒಳಾಂಗಣ ಮತ್ತು ಹೊರಾಂಗಣದ ಮೇಲ್ಭಾಗಕ್ಕೆ ಸುಮಾರು 15 ಲಕ್ಷ ವೆಚ್ಚದಲ್ಲಿ ತಗಡು ಶೀಟನ್ನು ಹೊದಿಸುವ ಕೆಲಸವು ಮುಗಿದಿರುತ್ತದೆ. ಈ ಅಭಿವೃದ್ಧಿ ಕೆಲಸಕ್ಕೆ ನಮ್ಮ ಸಮಾಜಬಾಂಧವರು ಹೆಚ್ಚಿನ ದೇಣಿಗೆಯನ್ನು ನೀಡಿದ್ದು, ಕರ್ನಾಟಕ ಸರಕಾರದಿಂದ 6 ಲಕ್ಷದ ಅನುದಾನವು ಮಂಜೂರಾಗಿರುತ್ತದೆ. ಶ್ರೀ ಕ್ಷೇತ್ರಕ್ಕೆ ಕಾರ್ಕಳ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯಿಂದ ಬರುವ ರಸ್ತೆಗೆ ಗ್ರಾಮ ಪಂಚಾಯತ್‌ನಿಂದ ದಾರಿದೀಪವನ್ನು ಅಳವಡಿಸಲಾಗಿದೆ. ಶ್ರೀಕ್ಷೇತ್ರದ ಒಳಗಿನ ಗೋಡೆಯಲ್ಲಿ ಶ್ರೀ ಗಣಪತಿ ದೇವರ ಪೈಂಟಿನ ಚಿತ್ರವನ್ನು ಬಿಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಶ್ರೀಕ್ಷೇತ್ರಕ್ಕೆ ಬರುವ ಮಣ್ಣಿನ ರಸ್ತೆಯನ್ನು ಕಾಂಕ್ರೀಟೀಕರಣ ಮಾಡಲು ಸರಕಾರಕ್ಕೆ ಪ್ರಸ್ತಾಪನೆಯನ್ನು ಕೊಟ್ಟಿರುತ್ತದೆ. ಅಲ್ಲದೆ ಶ್ರೀಕ್ಷೇತ್ರದ ಹೊರಗಿನ ಸುತ್ತಿಗೆ ಪಾದೆಕಲ್ಲಿನ ಗ್ರಾನೈಟ್‌ನ್ನು ಅಳವಡಿಸುವ ಕೆಲಸವು ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾಗುವುದು. ಈ ಎಲ್ಲಾ ಅಭಿವೃದ್ಧಿ ಕೆಲಸಗಳಿಗೆ ದೇಣಿಗೆಯನ್ನು ನೀಡಿದ ಸಮಾಜಬಾಂಧವರಿಗೆ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ರಘುವೀರರಾವ್, ಕಾರ್ಯದರ್ಶಿ ಶ್ರೀನಿವಾಸ ಶರ್ಮ, ಖಜಾಂಚಿ ಪಿ. ಡಿ. ಶೇಖರರಾವ್, ಅರ್ಚಕರಾದ ಜಗದಾಭಿರಾಮ ಸ್ವಾಮಿ, ನಯನಾಭಿರಾಮ ಸ್ವಾಮಿ, ಸದಸ್ಯರಾದ ನರೇಂದ್ರ ಸ್ವಾಮಿ, ರಾಜಶೇಖರ ರಾವ್ ಹೆಜಮಾಡಿಯವರು ಧನ್ಯವಾದವನ್ನು ತಿಳಿಸಿದ್ದಾರೆ.

# ಕಣ್ಮನ ಸೂರೆಗೊಂಡ ಕಾಶ್ಮೀರ ಕಣಿವೆ

–ಜೆ.ಕೆ ಕೋಲ್ಪೆ

ಇತ್ತೀಚೆಗೆ ನಾವು ಒಂಭತ್ತು ಜನ ಬಾಂಧವರು ಜಾಂಬವಂತನ ರಾಜ್ಯವೆಂದು ಹೇಳಲಾಗುವ ಜಮ್ಮುವಿನಿಂದ–ಕತ್ರಾ (50 ಕಿ.ಮೀ. ದೂರ) ಮಾರ್ಗವಾಗಿ ಹೆಲಿಕಾಪ್ಟರ್ ಮೂಲಕ ಪರ್ವತ ಏರಿ–ಇಳಿದು ಸುಮಾರು ಮೂರು ಕಿ.ಮೀ. ನಡೆದು ಮಾತೆ "ವೈಷ್ಣೋದೇವಿ"ಯ ದರ್ಶನ ಪಡೆದು ಧನ್ಯರಾದೆವು. ಸುಮಾರು 5–6 ಕಿ.ಮೀ ವ್ಯಾಪ್ತಿಯಲ್ಲಿ ದೇವಿಯ ಸ್ತೋತ್ರಗಳು ಸಪ್ತಶತಿಯ ಶ್ಲೋಕಗಳೊಂದಿಗೆ ಕೇಳಿಬರುತ್ತಿತ್ತು. ಆ ಗುಹಾಂತರ್ಗತ ದೇವಿಯ ಸನ್ನಿಧಿ ವರ್ಣಿಸಲಸಾಧ್ಯ. ಅಸಾಧ್ಯ ಜನಸಂದಣಿಯನ್ನು ನಿಯಂತ್ರಿಸುವ ದೇವಸ್ಥಾನದ ಆಡಳಿತ ಮಂಡಳಿಯ ಕಾರ್ಯ ವೈಖರಿ ಪ್ರಶಂಸಾರ್ಹ. ಬಹುಶಃ ದಕ್ಷಿಣದ ತಿರುಪತಿಯ ನಂತರದ ಸ್ಥಾನ "ವೈಷ್ಣೋದೇವಿ"ಯದ್ದು. ಈ ದೇವಳದ ಸಂಕೀರ್ಣದಿಂದ ಮೇಲಕ್ಕೆ ಸುಮಾರು ಎರಡು ಕಿ.ಮೀ. ಎತ್ತರದ ಬೆಟ್ಟದ ತುತ್ತ ತುದಿಯಲ್ಲಿದೆ 'ಭೈರೋನಾಥ' ಮಂದಿರ. ದೇವಿಯ ದರ್ಶನದ ಫಲಪ್ರಾಪ್ತಿಯಾಗ ಬೇಕಾದರೆ ಲಿಂಗರೂಪಿ ಭೈರೋನಾಥನ ದರ್ಶನ ಅನಿವಾರ್ಯವಂತೆ. ನಮ್ಮ ಗುಂಪಿನ ಕೆಲವರು ಕುದುರೆ ಏರಿ ಮೇಲಕ್ಕೇರಿದರೆ, ನಾವು 'ಸತಿ–ಪತಿ'ಯರು ನಾಲ್ಕು ಜನ ಹೊರುವ 2 ಡೋಲಿಗಳನ್ನು ಏರಬೇಕಾಯ್ತು. ಜನ್ಮಾಂತ್ಯದಲ್ಲಿ ನಾಲ್ಕು ಜನ ಹೊರುವ ಸ್ಥಿತಿ ನೆನಪಾದರೂ ಸುಧಾರಿಸಿಕೊಂಡು, ಮೈ ಕುಲುಕಿಸಿಕೊಳ್ಳುತ್ತಾ–ದೇವಿ ಧ್ಯಾನ ಮಾಡುತ್ತಾ ಪ್ರಯಾಣ ಮುಂದುವರಿಸಿ ಭೈರವೇಶ್ವರನ ದರ್ಶನ ಪಡೆದು, ಹಿಂತಿರುಗಿ ಹೆಲಿಕಾಪ್ಟರ್ ಮೂಲಕ ಕತ್ರಾಕ್ಕೆ ಬಂದು ವಾಸ್ತವ್ಯ ಮಾಡಿದೆವು. ಇಲ್ಲಿಯ ವಿಶೇಷವೆಂದರೆ ಕತ್ರಾ–ವೈಷ್ಣೋದೇವಿ ಸುತ್ತ–ಮುತ್ತ ಸುಮಾರು 15 ಕಿ.ಮೀ ಪರಿಧಿಯಲ್ಲಿ ಮಧು–ಮಾಂಸ ಸೇವನೆ ನಿಷೇಧ. ಈರುಳ್ಳಿ ಕೂಡಾ. ಬೆಟ್ಟದಲ್ಲಿ ನಮಗೆ ಮಾರ್ಗದರ್ಶಕನಾದ 'ಶಬ್ಬೀರ' ಎಂಬ ಮುಸ್ಲಿಂ ಯುವಕ ತಿಳಿಸಿದಂತೆ, ಕುದುರೆಗಳ ರಾವುತರು, ಡೋಲಿ ಹೊರುವವರು ಎಲ್ಲರೂ ಅವನ ಜಾತಿಯವರಾದರೂ ಮಧು–ಮಾಂಸ ಸೇವಿಸುವುದಿಲ್ಲವಂತೆ. ಪ್ರವಾಸಿಗರ ಸೇವೆಯೇ ಅವರ ಗುರಿ, ಅದರ ಸಂಪಾದನೆಯೇ ಅವರ ಜೀವನಾಧಾರ. ಹಾಗಾಗಿ ಇಲ್ಲಿ ಜಾತಿ ಭೇಧವಿಲ್ಲದೆ ಸಹಬಾಳ್ವೆ ಬಾಳುತ್ತಿದ್ದಾರಂತೆ. ಕತ್ರಾದಿಂದ ಹದಿನಾಲ್ಕು ಕಿ.ಮೀ ದೂರ ಬೆಟ್ಟ ಏರುವವರಿಗೆ (ಕಾಲ್ನಡಿಗೆಯಲ್ಲಿ) ಎಲ್ಲಾ ಅನುಕೂಲತೆಗಳೂ ದಾರಿಯಲ್ಲಿ ಲಭ್ಯ. ಇದಲ್ಲದೆ ಏಳು ಕಿ.ಮೀ ತನಕ ಹೊಸರಸ್ತೆ ನಿರ್ಮಾಣವಾದರೂ ಸದ್ಯ ಅನುಕೂಲತೆಗಳು ಅಲಭ್ಯ. ಈಗ ಕತ್ರಾದಿಂದ ಭೈರೋನಾಥ ಮಂದಿರ ತನಕ 'ಕೇಬಲ್ ಕಾರ್' ವ್ಯವಸ್ಥೆಯಾಗಿದ್ದು ಬರುವ ಆಗಸ್ಟ್ ಮಾಹೆಯಿಂದ ಈ ಸೌಲಭ್ಯ ಲಭ್ಯವಾಗಿದೆ. ಇಲ್ಲಿ ಇನ್ನೊಂದು ಮೆಚ್ಚಬೇಕಾದ ಅಂಶವೆಂದರೆ. ದೇವಳದ ಮಂಡಲಿಯವರು ಆಗಾಗ ಧ್ವನಿವರ್ಧಕದಲ್ಲಿ, ಯಾವುದೇ ರೀತಿಯ 'ಸವಾರಿ'ಯಲ್ಲಿ ಭಕ್ತಾದಿಗಳಿಗೆ ತೊಂದರೆ, ಸುಲಿಗೆ ಮಾಡದಂತೆ ಹಾಗೂ ಕುದುರೆ ರಾವುತರು ಕುದುರೆಗಳು ವೇಗವಾಗಿ ಸಾಗಿ ಗುರಿಮುಟ್ಟಲು ಅದರ ಬಾಲತಿರುಚಿ ಹಿಂಸೆ ಕೊಡದಂತೆ ಆದೇಶ ಕೊಡುತ್ತಿದ್ದರು. (ಇದು ನಮ್ಮೂರಿನ ಕಂಬಳದಲ್ಲಿ ಕೋಣಗಳನ್ನು ಕೆಲವು ಕಡೆ ಬಾಲತಿರುಚಿ ಓಡಿಸಿದಂತೆ). ಇಲ್ಲಿ ಹೆಲಿಕಾಪ್ಟರ್ ಪ್ರಯಾಣಕ್ಕೆ ನಿಗದಿಪಡಿಸಿದ ದರ ರೂ.2,154 (ಮೇಲೇರಿ ಕೆಳಗಿಳಿಯಲು), ಆದರೂ ಯಾತಾರ್ಥಿಗಳಿಂದ ಸುಮಾರು ರೂ.5,000 ತನಕ ವಸೂಲು ಮಾಡುತ್ತಾರೆಂದು ಪ್ರವಾಸಿ ಸಂಸ್ಥೆ ಮೊದಲೇ ತಿಳಿಸಿ ನಮ್ಮಿಂದ ಹಣಪಡೆದಿತ್ತು. ಇದರಲ್ಲಿ ಅಲ್ಲಿಯ ಪೋಲೀಸ್ ಹಾಗೂ ಹೆಲಿಕಾಪ್ಟರ್ ಸಂಸ್ಥೆಯ ಅಧಿಕಾರಿಗಳಿಗೆ ಪಾಲಿದೆಯೆಂದು ತಿಳಿದುಬಂತು ಕೊಡದಿದ್ದಲ್ಲಿ ಯಾತ್ರಿಕನು ಕನಿಷ್ಠ ಒಂದೆರಡು ದಿನ ಸರದಿಯಲ್ಲಿ ಕಾಯಬೇಕಂತೆ.

ಮೂರನೇ ದಿನ (ಜೂನ್ 1) ಸುಂದರ ವನಸಿರಿ ಧಾಮ 'ಪಹಲ್‌ಗಾಮ್' ಪಟ್ಟಣಕ್ಕೆ ಪ್ರಯಾಣ (ಚಂದ್ರಕೋಟ, ರಾಮಬನ್, ಉಧಾಂಪುರ, ಬನಿಹಾಲ್ ಮಾರ್ಗವಾಗಿ. ಕತ್ರಾದಿಂದ 280 ಕಿ.ಮೀ ದೂರ–7ತಾಸು ಪ್ರಯಾಣ) ನಮಗಾಗಿ ನಿಗದಿ ಪಡಿಸಿದ ಟ್ರಾವೆಲರ್ ಟೆಂಪೋದಲ್ಲಿ ñಡ್ರೈವರ್–ಕಂ–ಗೈಡ್ ಪಂಜಾಬಿ ಯುವಕ "ಸೋನು" ಸಾರಥ್ಯದಲ್ಲಿ. ಪರ್ವತ ಪ್ರದೇಶಗಳಲ್ಲಿ ನಾವು ಸಾಗುತ್ತಿದ್ದಾಗ ಚತುಷ್ಪಥ ಸುರಂಗ ರಸ್ತೆ–ಪರ್ವತ ಕೊರೆದು ರೈಲು ಮಾರ್ಗ ನಿರ್ಮಾಣ ಇತ್ಯಾದಿ ಕೆಲಸಗಳು ನಡೆಯುತ್ತಿದ್ದು ಸಾವಿರಾರು ಜನಕ್ಕೆ ಉದ್ಯೋಗ ದೊರಕಿಸಿ ಬದುಕುವ ದಾರಿ ತೋರಿಸುತ್ತಿರುವ ಈಗಿನ ಕೇಂದ್ರ ಸರಕಾರವನ್ನು ಎಷ್ಟು ಹೊಗಳಿದರೂ ಸಾಲದು. 'ಬನಿಹಾಲ್' ಮುಸ್ಲಿಂ ಬಾಹುಳ್ಯದ ಪಟ್ಟಣ. ಇಲ್ಲಿಂದ ಪ್ರಾರಂಭವಾಗುವ ರೈಲು ಮಾರ್ಗ ಶ್ರೀನಗರಕ್ಕೆ ಸಂಪರ್ಕ ಕಲ್ಪಿಸುತ್ತದೆ. ದಾರಿಯಲ್ಲಿ 'ಟೈಟಾನಿಕ್ ವ್ಯೂ ಪಾಯಿಂಟ್' ನ ವಿಹಂಗಮ ನೋಟ ರಸ್ತೆ ಬದಿಯ ಹೋಟೆಲೊಂದರಲ್ಲಿ 'ರಾಜ್‌ಮಾ' ಎಂಬ ಅಪರೂಪದ ಅಕ್ಕಿಯ ಅನ್ನದೂಟ. ಪಹಲ್‌ಗಾಂ ಸಮೀಪಿಸುತ್ತಿದ್ದಂತೆ 'ಲೀಡರ್ ವ್ಯಾಲಿ' ಎಂಬಲ್ಲಿ, ನಮ್ಮಲ್ಲಿ ಹೆಚ್ಚಿನವರು ಅಲ್ಲಿಯ ನದಿಯಲ್ಲಿ 'ರ್‍ಯಾಫ್ಟಿಂಗ್' ಅಂದರೆ ರಬ್ಬರ್ ದೋಣಿಯಲ್ಲಿ ನೀರಿನ ಏರಿಳಿತ ಮಧ್ಯೆ ಭಯ ಹುಟ್ಟಿಸುವ ಪ್ರಯಾಣ ಮಾಡಿ ಹೊಸ ಅನುಭವ ಪಡೆದರು. ಜೂನ್ 2 (ನಾಲ್ಕನೇ ದಿನ) ಪಹಲ್‌ಗಾಂನ ಬ್ಯಾಸ್ರಾನ್ (Baisran) ಎಂಬ ಮನಮೋಹಕ ಪರ್ವತ ಶ್ರೇಣಿಯ ವಿಹಾರಧಾಮಕ್ಕೆ (ಇದನ್ನು 'ಮಿನಿಸ್ವಿಟ್ಜರ್‌ಲೇಂಡ್' ಎಂದು ಕರೆಯುತ್ತಾರೆ. ಸುಮಾರು 12 ಕಿ.ಮೀ. (ಹೋಗಿಬರಲು) ಕುದುರೆ ಸವಾರಿ ಮಾಡಿ ಬಳಲಿದರೂ, ಅದೇ ದಿನ ಬೇತಾಬ್‌ವ್ಯಾಲಿ. ಚಂದನವಾಡಿಗೆ (ಇಲ್ಲಿಂದ ಮುಂದಕ್ಕೆ ಅಮರನಾಥಕ್ಕೆ ಸುಮಾರು 16 ಕಿ.ಮೀ.) ಭೇಟಿಕೊಟ್ಟು, ಅಂದು ಸಂಜೆ ಅರುವ್ಯಾಲಿಯ ಹಿಮಚ್ಛಾಧಿತ ಪರ್ವತಗಳ ಸುಂದರತೆಯನ್ನು ಕಣ್ಮನ ತಣಿಸಿಕೊಂಡೆವು. ಬ್ಯಾಸ್ರಾನ್ ದಾರಿಯಲ್ಲಿ ಕುದುರೆಗಳಿಗೆ ನೀರು–ಆಹಾರ ಕೊಡಲು ನಿಲ್ಲುವಲ್ಲಿಗೆ ಕಾಡಿನ ಗಿರಿಜನರು ತಮ್ಮ ಸಾಕುಪ್ರಾಣಿಗಳಾದ ಕುರಿ/ಆಡಿನ ಮರಿಗಳು, ಮೊಲಗಳು. ವಿವಿಧ ಹಕ್ಕಿಗಳನ್ನು ನಮ್ಮ ಹತ್ತಿರ (ಪ್ರಯಾಣಿಕರ) ಒಂದು ಫೋಟೋ ತೆಗೆಸಿಕೊಳ್ಳಲು ಹತ್ತಿಪ್ಪತ್ತು ರೂಪಾಯಿಗೋಸ್ಕರ ಗೋಗರೆಯುವ ಹೀನಾಯ ಸ್ಥಿತಿ ಕಂಡು ಮರುಗು ವಂತಾಯಿತು.

ಪ್ರವಾಸದ 5ನೇ ದಿನ (ತಾ.2/06/2018) ಇನ್ನೊಂದು ನಿಸರ್ಗ ರಮಣೀಯ ತಾಣ 'ಗುಲ್ಮಾರ್ಗ್' ಕಡೆಗೆ ನಮ್ಮ ಪ್ರಯಾಣ. ಪಹಲ್‌ಗಾಂ ನಿಂದ 140 ಕಿ.ಮೀ. ದೂರ ಐದುವರೆ ($5^{1}/_{2}$) ತಾಸು ಪ್ರಯಾಣ. ಬಿಜ್‌ಬೆಹರಾ ಜಂಕ್ಷನ್‌ನಿಂದ ರಾ.ಹೆ.44ರ ಮೂಲಕ ಪ್ರಯಾಣಿಸಿ ಸಂಗಂ ಪಟ್ಟಣದ ಸುತ್ತ ಮುತ್ತ ಕ್ರಿಕೆಟ್ ಬ್ಯಾಟ್ (Bat) ತಯಾರಿಸುವ ಕಾರ್ಖಾನೆಗಳು ಹಾಗೂ ರಸ್ತೆ ಬದಿಯ ಕಟ್ಟಡಗಳಲ್ಲಿ ಬ್ಯಾಟ್‌ಗಳನ್ನು ಜೋಡಿಸಿಟ್ಟ ದೃಶ್ಯವನ್ನು ಕಣ್ತುಂಬಿಸಿಕೊಂಡೆವು. ಇವುಗಳು ನಮ್ಮ ದೇಶದ ಉದ್ದಗಲಕ್ಕೂ ಹಾಗೂ ಪರದೇಶಗಳಿಗೆ ಸರಬರಾಜಾಗುತ್ತದೆ. ಇಲ್ಲಿ ಸಮೀಪ ಝೀಲಂ ನದಿ ಹರಿಯುತ್ತೆದೆ. ಹತ್ತಿರದಲ್ಲೇ 'ಅವಂತೀಪುರ' ಎಂಬಲ್ಲಿ ಅವಂತಿಸ್ವಾಮಿ ಮಂದಿರವನ್ನು ಮಹಾರಾಜ ಅವಂತೀವರ್ಮ (855–83 AD) ಕಟ್ಟಿಸಿದ್ದನಂತೆ. ಕಶ್ಯಪ ಮುನಿಗಳ ತಪೋಭೂಮಿ. ಇಲ್ಲಿ ಪಂಚಾಯತನ ಮಂದಿರವಿದ್ದು, ಈಗ ಪಾಳುಬಿದ್ದು ಕೇಂದ್ರ ಸಂಶೋಧನ ಇಲಾಖೆಯ ಸುಪರ್ದಿಯಲ್ಲಿದೆ. ಮುಂದಕ್ಕೆ ಬಾರಾಮುಲ್ಲಾ ರಸ್ತೆ ಮೂಲಕ ಸಾಗಿ, 'ಗುಲ್ಮಾರ್ಗ' ಪಟ್ಟಣ ಸೇರಿದೆವು. ಸಂಜೆ, ಬೆಟ್ಟ ಪ್ರದೇಶದಲ್ಲಿ ಹಿಮಚ್ಛಾಧಿತ ಪರ್ವತಗಳನ್ನು ವೀಕ್ಷಿಸುತ್ತಾ "ಗೊಂಡೋಲಾ" ದಲ್ಲಿ ಪ್ರಯಾಣಿಸಿ, ನಿಸರ್ಗ ಸೌಂದರ್ಯ ಸವಿದು ಹಿಂತಿರುಗಿದೆವು. ಆರನೇ ದಿನ (ತಾ.4/06/2018) ಗುಲ್ಮಾರ್ಗನಿಂದ ಶ್ರೀನಗರಕ್ಕೆ ಪ್ರಯಾಣಿಸಿ (20ಕಿ.ಮೀ.$3^{1}/_{2}$ ತಾಸು) ವಾಸ್ತವ್ಯ ಹೂಡಿ ಬೆಟ್ಟದ ಮೇಲಿನ (ಸುಮಾರು 244 ಮೆಟ್ಟಿಲು) ಶ್ರೀ ಆದಿಗುರು ಶಂಕರಾಚಾರ್ಯರ ದೇವಸ್ಥಾನ, ಅವರು ತಪಸ್ಸು ಗೈದ ಪುಣ್ಯಸ್ಥಳ, (ಇಲ್ಲಿ ಇತ್ತೀಚೆಗೆ ಶೃಂಗೇರಿಯಿಂದ ಸುಮಾರು 200 ಜನ ವೈದಿಕ ತಂಡ ಬಂದು ರುದ್ರಯಾಗ ಮಾಡಿದ್ದರಂತೆ) ಶ್ರೀ ಶಂಕರರು ಸ್ಥಾಪಿಸಿದ 'ಸ್ಪಟಿಕಲಿಂಗ' ಸಂದರ್ಶಿಸಿ ಪುನೀತರಾದೆವು. ಆ ದಿನ ಸಂಜೆ ಮುಘಲ್ ಗಾರ್ಡನ್ (ನಿಷದ್ ಬಾಗ್) ಬೊಟಾನಿಕಲ್ ಗಾರ್ಡನ್ (ಚಶ್ಮಾವಾಡ)ಗಳನ್ನು ಸಂದರ್ಶಿಸಿ, ಶ್ರೀನಗರದ ವಿಶ್ವವಿಖ್ಯಾತ ದಾಲ್ ಸರೋವರದಲ್ಲಿ 'ಶಿಖಾರ್ ರೈಡ್' ಅಂದರೆ ಅಲಂಕೃತ ದೋಣಿಯಲ್ಲಿ ವಿಹರಿಸಿದೆವು. ಈ ವಿಹಾರಗಳು ವಿವಾಹದ ನಂತರ 'ಮಧುಚಂದ್ರ' ದಲ್ಲಿ ನಡೆದರೆ, ಆ ನೆನಪು ಶಾಶ್ವತವಾಗುತ್ತಿತ್ತು. ಅಂತೂ ನನ್ನ ಸಹಸ್ರಚಂದ್ರ ದರ್ಶನದ ಮೊದಲೇ ನಡೆದದ್ದು ವಿಪರ್ಯಾಸ. ದಾಲ್‌ಸರೋವರದ ದೋಣಿ ವಿಹಾರಗಳು ಈಗ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಬಂದಿದ್ದು,ಯದ್ವಾತದ್ವಾ ಹಣ ವಸೂಲು ಮಾಡಲಾಗುತ್ತಿಲ್ಲ ಎಂಬ ಕೊರಗು ದೋಣಿ ಧಣಿಗಳದ್ದು.

ಏಳನೇ ದಿನ (ತಾ.5/06/18) ಶ್ರೀನಗರದಿಂದ ಸೋನಾಮಾರ್ಗ (90ಕಿ.ಮೀ ದೂರ 4 ತಾಸು ಪ್ರಯಾಣ) ಕಾರ್ಗಿಲ್ ದಾರಿ. (ಪಾಕ್ ಗಡಿ ಪ್ರದೇಶ). ಎಲ್ಲೆಂದರಲ್ಲಿ ನಮ್ಮ ಸೈನಿಕರ ಕಣ್ಗಾವಲು! ದಾರಿಯ ಪರ್ವತ ಪ್ರದೇಶಗಳಲ್ಲಿ ಸೈನಿಕರಿಗೆ ಕಠಿಣ ತರಬೇತಿ ನಡೆಯುತ್ತಿತ್ತು. ಚಳಿ/ಗಾಳಿ, ಬಿಸಿಲು–ಮಳೆ ಲೆಕ್ಕಿಸದೆ ನಡೆಯುವ ಅವರ ರಕ್ಷಣೆಯಿಂದ, ನಾವು ನೆಮ್ಮದಿಯಿಂದ ಬದುಕಿದ್ದೇವೆ. ಭಾರತ ಮಾತೆ ಅವರನ್ನು ರಕ್ಷಿಸಲಿ! ಸರಕಾರ ಅವರಿಗೆ ಹೆಚ್ಚಿನ ಸ್ವಾಯತ್ತತೆ ಕೊಟ್ಟು ಶತ್ರು ಸಂಹಾರವಾಗಲಿ! ಶಾಂತಿ ನೆಲಸಲಿ! ಸೋನ ಮಾರ್ಗದಲ್ಲಿ ನಮ್ಮವರು ಅಲ್ಲಿಯ ವಾಹನದ ಮೂಲಕ ಹಿಮಚ್ಛಾಧಿತ ಪರ್ವತ ಪ್ರದೇಶಕ್ಕೆ ತೆರಳಿ ಸಾಕಷ್ಟು ಆಟವಾಡಿ (ಹಿಮದಲ್ಲಿ ಸ್ಕೇಟಿಂಗ್) ಸಂಭ್ರಮಿಸಿ, ದಣಿದು ಒಲ್ಲದ ಮನಸ್ಸಿನಿಂದ ಹಿಂತಿರುಗಿದರು. ಅಂತಹ ಆಕರ್ಷಣೆ ಆ ಪ್ರಕೃತಿದತ್ತ ಪ್ರದೇಶಕ್ಕಿತ್ತು.

ಕಾಶ್ಮೀರ ಕಣಿವೆಯಲ್ಲಿ ಜನಜೀವನ ನಮ್ಮ ನೆರೆದೇಶದವರಿಂದಾಗಿ ದುರ್ಬರವಾಗುತ್ತಿದೆ. ಶಾಂತಿ ಕದಡುತ್ತಿದೆ! ಈಗಿನ ಸಮ್ಮಿಶ್ರ ಸರ್ಕಾರ ಕೇಂದ್ರದ ನೆರವಿನಿಂದ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರೂ ಕೆಳಹಂತದ ಜನರಿಗೆ ಸರಿಯಾಗಿ ಸಿಗುತ್ತಿಲ್ಲವಂತೆ. ನಾನು ಕೆಲವರೊಂದಿಗೆ (ವಾಹನ ಚಾಲಕ/ ಮಾರ್ಗದರ್ಶಿಗಳು/ಹೋಟೆಲ್ ಕೆಲಸಗಾರರು/ ಹಾಗೂ ರಜೆಯ ಮೇಲೆ ತೆರಳುತ್ತಾ ನಮ್ಮೊಂದಿಗೆ ಪ್ರಯಾಣಿಸಿದ ಕರ್ನಾಟಕದ ಯುವ ಸೈನಿಕ) ಮಾತನಾಡಿದಾಗ ಸರಕಾರದಿಂದ ಮನೆಗೊಬ್ಬರಿಗೆ ಕೆಲಸ ಕೊಡುವ ಕ್ರಮ ಜಾರಿ ಇದ್ದರೂ, ಕೆಲವು ಭಾಗಗಳಲ್ಲಿ ಉದ್ಯೋಗ ದೊರಕಿಲ್ಲವಂತೆ. ರಾಜಕೀಯ ವ್ಯಕ್ತಿಗಳು ತಮ್ಮ ಭಾಗದ ಅಭಿವೃದ್ಧಿಯಲ್ಲಿ ಕೆಲವು ಕಡೆ ನಿಷ್ಕ್ರಿಯ ರಾಗಿದ್ದಾರಂತೆ. ಕುದುರೆ ಸವಾರಿ–ಹೇಸರಗತ್ತೆ/ ಕುರಿ ಸಾಕಣೆ/ ಡೋಲಿ ಪ್ರಯಾಣ/ ದೋಣಿ ವಿಹಾರ ಇತ್ಯಾದಿ ಶ್ರೀಮಂತ ಸಾಹುಕಾರರ ನಿಯಂತ್ರಣದಲ್ಲಿದ್ದು, ಕೆಲಸಗಾರರಿಗೆ ಬರುವ ಸಂಬಳ ಬಹಳ ಕಡಿಮೆಯಂತೆ. ಸೈನಿಕರ ಮೇಲೆ ಕೆಲಭಾಗಗಳಲ್ಲಿ ಕಲ್ಲು ತೂರಿ, ಶಾಂತಿ ಕದಡುವ ಉಗ್ರರಿಗೆ ವೈರಿಗಳಿಂದ ಧಾರಾಳ ಹಣಸಿಗುತ್ತದಂತೆ. ವಿದ್ಯಾವಂತ ಯುವಕರು ಕೂಡಾ ಹಿಂಸಾಮಾರ್ಗ ಹಿಡಿಯುತ್ತಿದ್ದಾರಂತೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಕಾನೂನು ವ್ಯವಸ್ಥೆಯನ್ನು ಬಿಗಿಗೊಳಿಸಿ, ಯುವ ಪೀಳಿಗೆಗೆ ಕೈ ತುಂಬಾ ಕೆಲಸ ಸಿಗುವಂತೆ ಮಾಡಿ ಅವರ ಜೀವನ ಭದ್ರತೆಗೆ ದಾರಿ ತೋರಿಸಿದರೆ ಈ ಪರಿಸ್ಥಿತಿ ಸ್ವಲ್ಪ ಹಗುರವಾಗಬಹುದು. ಕೆಲವು ಮಾಧ್ಯಮಗಳು, ರಾಜಕೀಯ ವ್ಯಕ್ತಿಗಳು–ಶ್ರೀಮಂತ ವ್ಯಾಪಾರಸ್ಥರು ಸಹಕರಿಸಿದರೆ, ಶಾಂತಿ ಪಾಲನೆಗೆ ನಮ್ಮ ಸೇನೆ ಸದಾಸಿದ್ಧವಾಗಿದೆ. ಪ್ರವಾಸೋಧ್ಯಮವನ್ನು ನಂಬಿದ ಆ ರಾಜ್ಯಕ್ಕೆ–ಪರರಾಜ್ಯ–ಪರದೇಶಗಳಿಂದ ಸಹಕಾರ ಸಿಕ್ಕಿñಆತಂಕವಾದಿಗಳ ಭಯ ನಿವಾರಣೆಯಾದರೆ, ಆ ರಾಜ್ಯ ಭಾರತದ ಭೂಪಟದಲ್ಲಿ ರಾರಾಜಿಸಲಿದೆ! ಏನೇ ಇರಲಿ. ಈ ರೀತಿಯ ಪ್ರವಾಸಗಳಿಂದ ನಾವು ಕಲಿಯುವುದು ಸಾಕಷ್ಟಿದೆ. ಆ ಭಾಗದ ಜನಜೀವನ, ಪ್ರಕೃತಿದತ್ತ ಕೊಡುಗೆ, ವನಸಿರಿ, ನದಿ–ಪರ್ವತಗಳು, ಶ್ರದ್ಧಾಕೇಂದ್ರಗಳು ಇತ್ಯಾದಿ ವಿಶೇಷತೆಗಳ ಮಾಹಿತಿ ಹಂಚಿಕೊಂಡರೆ ಅದಕ್ಕೊಂದು ಅರ್ಥವಿದೆ. ಹಾಗೂ ಮುಂದಿನ ಪ್ರವಾಸಿಗಳಿಗೆ ಮಾರ್ಗದರ್ಶನವಾಗಲಿದೆ. ಎಂಟನೇ ದಿನ ತಾ.6/06/2018 ಶ್ರೀನಗರ ದಿಂದ ಹೊರಟು ಬೆಂಗಳೂರಿಗಾಗಿ ರಾತ್ರಿ 11 ಗಂಟೆಗೆ ಉಡುಪಿ ತಲುಪಿದೆವು. ಈ ರೀತಿ ಕಣ್ಮನ ಸೂರೆಗೊಂಡ ದೇಶದ ಮುಕುಟ ಭಾಗವಾದ "ಕಾಶ್ಮೀರ ಕಣಿವೆ" ಯನ್ನು ಉಳಿದ ಜೀವನದುದ್ದಕ್ಕೂ ಮರೆಯಲಾರೆ! ತಪ್ಪು ಮಾಹಿತಿ ಇದ್ದಲ್ಲಿ ಸರಿಪಡಿಸಿಕೊಳ್ಳಿ ಹಾಗೂ ಕ್ಷಮೆ ಇರಲಿ. ನಾವು ಒಂಭತ್ತು ಜನರಿಗಾಗಿ ಮಾತ್ರ ಈ ಪೇಕೇಜ್ ಟೂರ್ (ಊಟ, ವಸತಿ, ಪ್ರಯಾಣ ವ್ಯವಸ್ಥೆ ಸಹಿತವಾಗಿ) ಸಂಘಟಿಸಲ್ಪಟ್ಟ ಪ್ರವಾಸದ ವ್ಯವಸ್ಥಾಪಕರು ಥೊಮ್ಸನ್ ಕುಕ್ ಇಂಡಿಯಾ ಪ್ರೈ. ಲಿಮಿಟೆಡ್, ಬೆಂಗಳೂರುñಇವರ ಉಡುಪಿ ಶಾಖೆಯ ಸಹಯೋಗದೊಂದಿಗೆ.

ವಿಶೇಷ ಮಾಹಿತಿ : ಕಾಶ್ಮೀರ ಕಣಿವೆಯಲ್ಲಿ ಕಾಣಸಿಗುವ ವಿಶೇಷ ಮರಗಳು : ವಾಲ್ನಟ್, ಚೆರ್‍ರಿ, ಕಿನಾರ್, ಸೇಬು, ಬಿಲ್ಲೊ (ಕ್ರಿಕೆಟ್ ಬ್ಯಾಟ್ ತಯಾರಿಕೆಗೆ). ಆಲ್‌ಮಂಡ್ (ಬಾದಾಮಿ), ಕ್ಯಾರಿ ಹಾಗೂ ಸೇಪ್ರನ್ (ಕೇಸರಿ), ನವಂಬರ್–ಡಿಸೆಂಬರ್ ಹಣ್ಣು ಹಂಪಲುಗಳ ಭರಪೂರ ಬೆಳೆಯ ಕಾಲ. ಪರ್ವತಗಳಲ್ಲಿ ಹಿಮಚ್ಛಾಧಿತ ಸಮಯ ನವಂಬರಿನಿಂದ–ಮಾರ್ಚ್ ತನಕ. ಮುಖ್ಯ ನದಿಗಳು : ತಾವಿ, ಚೀನಾಬ್, ಝೀಲಂ, ಸಿಂಧೂ. ಮುಖ್ಯ ಜಿಲ್ಲೆಗಳು : ಜಮ್ಮು, ಉಧಂಪುರ, ಬನಿದಾಲ್, ಅನಂತನಾಗ್, ಶ್ರೀನಗರ, ಗಾಂಧರವಾಲ್, ಕಾರ್ಗಿಲ್, ರಾಮಬನ್, ರಿಯಾ.

(ಫೋಟೋ : 12ನೇ ಪುಟದಲ್ಲಿ)

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್
ಸಂಪರ್ಕ ಸಂಖ್ಯೆ 9611099894

Buying and selling shares as easy as checking your emails
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

### 2017-18ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

**(ಸಂಘದ ಸದಸ್ಯರಿಗೆ ಮಾತ್ರ)**

ಮಾನ್ಯ ಸದಸ್ಯ ಬಾಂಧವರೇ, ತಾ.08-07-2018

ನಮ್ಮ ಸಂಘದ 2017-18ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.12-08-2018ನೇ ರವಿವಾರ ಬೆಳಿಗ್ಗೆ 10-00 ಗಂಟೆಗೆ ಸರಿಯಾಗಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿರುವುದು. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಶ್ರದ್ಧಾಂಜಲಿ
3. ಸ್ವಾಗತ
4. 2017-18ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
5. 2016-17ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯ ಮಂಡನೆ ಮತ್ತು ಅಂಗೀಕಾರ
6. 2017-18ನೇ ವರ್ಷದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ವರದಿಯ ಮಂಡನೆ ಮತ್ತು ಅಂಗೀಕಾರ
7. 2017-18ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
8. 2018-19ನೇ ವರ್ಷದ ಅಂದಾಜು ಆಯ-ವ್ಯಯ ಪಟ್ಟಿಯ ಮಂಡನೆ ಮತ್ತು ಅಂಗೀಕಾರ.
9. 2018-19ನೇ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ
10. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳು
11. ಅಧ್ಯಕ್ಷರ ಮಾತು
12. ಚುನಾವಣಾ ಪ್ರಕ್ರಿಯೆ : 2018-2021ರ ಅವಧಿಗೆ
13. ಫಲಿತಾಂಶ ಪ್ರಕಟಣೆ
14. ಧನ್ಯವಾದ

- ಕಾರ್ಯದರ್ಶಿ

ವಿ.ಸೂ. : *ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ತಾ.04-08-2018ರ ಸಂಜೆ 6 ಗಂಟೆಗೆ (ಕಛೇರಿಯ ಕೆಲಸದ ಸಮಯದಲ್ಲಿ) ಮುಂಚಿತವಾಗಿ ಕಾರ್ಯದರ್ಶಿ/ಮೆನೇಜರ್ ರವರಿಗೆ ಪತ್ರ ಮುಖೇನ ತಲುಪಿಸಬೇಕು. ಮಹಾಸಭೆಯ ನಂತರ ಅಪರಾಹ್ನ ಊಟದ ವ್ಯವಸ್ಥೆ ಇರುತ್ತದೆ.

## ಘನಪುರೀ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠ

**ಶ್ರೀ ಕಾಮಾಕ್ಷೀ ಶಾರದಾದೇವಿಯ ಸನ್ನಿಧಿ ಹೆಬ್ಬೂರು.**

**ತುಮಕೂರು ಜಿಲ್ಲೆ-572120, ಫೋನ್ : 0816 2241032**

### ಚಾತುರ್ಮಾಸ್ಯ ಹಾಗೂ ಋಕ್ಸಂಹಿತಾಯಾಗ ಆಹ್ವಾನ ಪತ್ರಿಕಾ

ಜುಲೈ 27ನೇ ಶುಕ್ರವಾರ 2018 ರಿಂದ ಸೆಪ್ಟಂಬರ್ 24 ನೇ ಸೋಮವಾರ 2018ರವರೆಗೆ

**ವಿವಿಧ ಕಾರ್ಯಕ್ರಮಗಳು**

- ಜುಲೈ 27ನೇ ಶುಕ್ರವಾರ 2018 ವ್ಯಾಸಪೂಜಾ/ಚಾತುರ್ಮಾಸ್ಯ ಸಂಕಲ್ಪ
- ಜುಲೈ 28ನೇ ಶನಿವಾರ 2018 ಉತ್ತರಪೂಜಾ ವ್ಯಾಸಾಕ್ಷತೆ
- ಜುಲೈ 29ನೇ ಭಾನುವಾರದಿಂದ 5ನೇ ಆಗಸ್ಟ್ ಭಾನುವಾರದವರೆಗೆ ಋಕ್ಸಂಹಿತಾಯಾಗ
- ಸೆಪ್ಟಂಬರ್ 24ನೇ ಸೋಮವಾರ 2018 ಚಾತುರ್ಮಾಸ್ಯ ಸಮಾಪ್ತಿ

ಆತ್ಮೀಯ ಸದ್ಭಕ್ತರೇ,

ಶ್ರೀ ಮಠದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಲೋಕಕಲ್ಯಾಣಾರ್ಥ **ಋಕ್ (ಶಾಕಲ ಶಾಖೆ) ಸಂಹಿತಾ ಯಾಗ** ನೆರವೇರಲಿದೆ. ದಿನಾಂಕ 29-07-2018 ರಂದು ಋಕ್ಸಂಹಿತಾಯಾಗ ಆರಂಭಗೊಂಡು 05-08-2018 ರಂದು ಪೂರ್ಣಾಹುತಿ ಇರುತ್ತದೆ. 05-08-2018 ಭಾನುವಾರದಂದು ಋಕ್ಸಂಹಿತಾಯಾಗ ಪೂರ್ಣಾಹುತಿಯ ನಂತರ 11 ಗಂಟೆಗೆ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರು ಆಶೀರ್ವಚನ ನೀಡಲಿದ್ದಾರೆ.

**ಸರ್ವರಿಗೂ ಆದರದ ಸ್ವಾಗತ**

- ವಿಶ್ವಸ್ತ ಮಂಡಳಿ ಶ್ರೀ ಮಠ, ಹೆಬ್ಬೂರು

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.31-07-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.25-07-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.17-07-2018, ತಾ.02-08-2018 ಮತ್ತು ತಾ.15-08-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2018-19

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.30-09-2018ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ 2018-19

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2018-2019ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ನಿಗದಿತ ಅರ್ಜಿ ಫಾರಂನ್ನು** ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.30-09-2018ರ** ಒಳಗೆ ತಲಪುವಂತೆ ಕಳುಹಿಸಬೇಕು.

ವಿ.ಸೂ. : **ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.** -ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2018-19

ಉಡುಪಿ ಮತ್ತು ದ.ಕ. ಜಿಲ್ಲೆಗಳ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.30-09-2018ರೊಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಉದಯಚಂದ್ರ ಪ್ರತಿಭಾ ಪುರಸ್ಕಾರ 2018-19

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2017-18ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.30-09-2018**ರೊಳಗೆ ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.

### ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| 14-07-2018 | ಗ್ರೀಷ್ಮ ಋತು ಆಷಾಢ ಮಾಸ ಶುಕ್ಲಪಕ್ಷಾರಂಭ |
| 16-07-2018 | ಕರ್ಕಾಟಕ ಸಂಕ್ರಮಣ ದಕ್ಷಿಣಾಯನ ಆರಂಭ |
| 23-07-2018 | ಸರ್ವೈಕಾದಶಿ |
| 27-07-2018 | ಗುರುಪೂರ್ಣಿಮಾ |
| 28-07-2018 | ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣಪಕ್ಷಾರಂಭ |
| 31-07-2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.31 |
| 07-08-2018 | ಸರ್ವೈಕಾದಶಿ |
| 10-08-2018 | ಶ್ರೀ ಶಾರದಾ ದೇವಸ್ಥಾನದಲ್ಲಿ ಹೂವಿನ ಪೂಜೆ ಸಂಜೆ 5 ಗಂಟೆಗೆ |
| 11-08-2018 | ಅಮಾವಾಸ್ಯೆ |
| 12-08-2018 | ವರ್ಷ ಋತು ಶ್ರಾವಣ ಮಾಸ ಶುಕ್ಲಪಕ್ಷಾರಂಭ |
| 15-08-2018 | ನಾಗರಪಂಚಮಿ |
| 17-08-2018 | ಸಿಂಹ ಸಂಕ್ರಮಣ |

## ಜನ್ಮ ಶತಾಬ್ಧಿ ಚಿರಸ್ಮರಣೆ

# ದಿ| ಕೆ. ಪದ್ಮನಾಭ ಶಾಸ್ತ್ರಿ, ಪಡುಬಿದ್ರಿ

(ಕಾಪು ಗೋಪಾಲಕೃಷ್ಣ ರಾವ್ ಮತ್ತು ನಾಗವೇಣಿಯಮ್ಮನವರ ಪುತ್ರ)

ಜನನ : 31–07–1918 (ನೀವು ಅತ್ತಿರಿ)    ನಿಧನ : 12–01–2003 (ನಾವು ಅತ್ತೆವು)



ದಿ| ಕೆ ಪದ್ಮನಾಭ ಶಾಸ್ತ್ರಿ
ಪುರೋಹಿತರು ಜ್ಯೋತಿಷ್ಯರು ಮತ್ತು ನಾಗಪಾತ್ರಿಗಳು

ದಿ| ಮೀನಾಕ್ಷಿ ಯಾನೆ ಕೆ. ಸುಮತಿ ಶಾಸ್ತ್ರಿ
ಕುಂಜೂರು ಯು.ರಾಮಚಂದ್ರ ರಾವ್ ಜಲಜಾಕ್ಷಿಯಮ್ಮರವರ ಪುತ್ರಿ

## ನಿಮ್ಮನ್ನು ಸದಾಕಾಲ ಸ್ಮರಿಸುತ್ತಿರುವ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಮರಿಮಕ್ಕಳು

### ಪುತ್ರರು

1. ಶ್ರೀ ಕೆ. ದೇವರಾಯ ಶಾಸ್ತ್ರಿ ಮತ್ತು ಶ್ರೀಮತಿ ಕೆ. ಮೋಹಿನಿ ಶಾಸ್ತ್ರಿ, ಅಲೆವೂರು ಉಡುಪಿ
   a) ಶ್ರೀ ಕೆ. ನವೀನ್ ಕುಮಾರ್ ಮತ್ತು ಶ್ರೀಮತಿ ಕೆ. ಅಮಿತ, ಚಿಕ್ಕಮಗಳೂರು
      i) ಮಾ| ಅನುಜ್ ಕುಮಾರ್
   b) ಶ್ರೀ ಕೆ. ನಿತಿನ್ ಕುಮಾರ್ ಮತ್ತು ಶ್ರೀಮತಿ ಕೆ. ಅಕ್ಷತಾ, ಬೆಂಗಳೂರು
      i) ಕು| ಅವನಿ
      ii) ಕು| ನಿಹಿರ
2. ಶ್ರೀ ಕೆ. ಅನಂತರಾಮ ಶಾಸ್ತ್ರಿ ಮತ್ತು ಶ್ರೀಮತಿ ವೀಣಾ ಅನಂತರಾಮ್, ಬೆಂಗಳೂರು
   a) ಶ್ರೀ ಕೆ. ಅರ್ಜುನ್ ಶಾಸ್ತ್ರಿ, ಯು.ಎಸ್.ಎ.
   b) ಶ್ರೀ ಕೆ. ಅಚಲ್ ಶಾಸ್ತ್ರಿ, ಬೆಂಗಳೂರು
3. ಶ್ರೀ ಕೆ. ಶಿವಶಂಕರ ರಾವ್ ಮತ್ತು ಶ್ರೀಮತಿ ಕೆ. ಸೀತಾರತ್ನ, ಮೈಸೂರು
   a) ಶ್ರೀ ಕೆ.ಎಸ್.ಅಭಿಲಾಷ್ ಮತ್ತು ಶ್ರೀಮತಿ ಕೆ. ಮಾನಸ, ಬೆಂಗಳೂರು
      i) ಬೇಬಿ ಧ್ವನಿ
   b) ಶ್ರೀ ಕೆ. ಎಸ್. ಅಭಿಷೇಕ್ ಮತ್ತು ಶ್ರೀಮತಿ ಕೆ. ಶ್ರುತಿ, ಬೆಂಗಳೂರು
4. ದಿ| ಕೆ. ಜಗದೀಶ ಶಾಸ್ತ್ರಿ ಇವರ ಪತ್ನಿ ಶ್ರೀಮತಿ ಕೆ. ಯಶೋದ ಶಾಸ್ತ್ರಿ, ಪಡುಬಿದ್ರಿ
   a) ಶ್ರೀ ಕೆ. ಸ್ಕಂದಸ್ವಾಮಿ ಶಾಸ್ತ್ರಿ, ಬೆಂಗಳೂರು
   b) ಶ್ರೀ ಕೆ. ರಾಜಶೇಖರ ಶಾಸ್ತ್ರಿ, ಮುಂಬೈ
   c) ಶ್ರೀ ಕೆ. ಅಪರ್ಣ ಶಾಸ್ತ್ರಿ ಮತ್ತು ಶ್ರೀ ನಾಗರಾಜ, ಭಟ್ಕಳ
      i) ಕು| ನಿವೇದಿತಾ
      ii) ಮಾ| ರವಿತೇಜ
5. ದಿ| ಕೆ. ಹಿರಿಯಣ್ಣ ಶಾಸ್ತ್ರಿ ಪಡುಬಿದ್ರಿ ಇವರ ಪತ್ನಿ ಶ್ರೀಮತಿ ಕೆ. ಭಾರತಿ ಶಾಸ್ತ್ರಿ, ತೀರ್ಥಹಳ್ಳಿ
   a) ಶ್ರೀ ಕೆ. ಸಾಹಿತ್ಯ ಶಾಸ್ತ್ರಿ ಮತ್ತು ಶ್ರೀಮತಿ ಸಂಗೀತ ಶಾಸ್ತ್ರಿ, ಬೆಂಗಳೂರು
      i) ಮಾ| ಸಂಹಿತ್
   b) ಶ್ರೀಮತಿ ಕೆ. ಸೌಂದರ್ಯ ಮತ್ತು ಶ್ರೀ ಕಿರಣ್ ಕುಮಾರ್, ಸೀತೂರು, ಕೊಪ್ಪ
      i) ಮಾ| ಸಮ್ಯಕ್

### ಪುತ್ರಿಯರು

1. ದಿ| ಹೇಮಾವತಿ ಮತ್ತು ದಿ| ಶ್ರೀ ಸದಾನಂದ ರಾವ್, ಸುರಿಯ, ಬೆಳ್ತಂಗಡಿ ಇವರ ಮಕ್ಕಳು
   a) ಶ್ರೀ ರವಿ ಪ್ರಕಾಶ ರಾವ್ ಮತ್ತು ಶ್ರೀಮತಿ ಭಾರತಿ, ಹೆಬ್ರಿ
      i) ಕು| ವಂದನ
   b) ಶ್ರೀ ಕೆ. ಶಿವಪ್ರಸಾದ ರಾವ್ ಮತ್ತು ಶ್ರೀಮತಿ ಗೀತಾ, ಪಡುಬಿದ್ರಿ
      i) ಶ್ರೀಮತಿ ಅಕ್ಷತ ಮತ್ತು ಶ್ರೀ ಶ್ರೀಚರಣ್, ಬೆಂಗಳೂರು
      ii) ಕು| ಅಪೇಕ್ಷ ರಾವ್
   c) ಶ್ರೀ ಲಕ್ಷ್ಮೀಕಾಂತ ರಾವ್ ಮತ್ತು ಶ್ರೀಮತಿ ಲೀಲಾವತಿ, ಧರ್ಮಸ್ಥಳ
   d) ಶ್ರೀ ಅರವಿಂದ ರಾವ್ ಮತ್ತು ಶ್ರೀಮತಿ ಸತೀ ದೇವಿ, ಕಾಸರಗೋಡು
      i) ಮಾ| ಅಭಿಷೇಕ್
   e) ಶ್ರೀಮತಿ ಭಾಗ್ಯಲಕ್ಷ್ಮಿ ಎಸ್. ಮತ್ತು ಶ್ರೀ ಮಂಜುನಾಥ ಟಿ.ಎಸ್., ತೀರ್ಥಹಳ್ಳಿ
      i) ಕು| ಅಪೇಕ್ಷ ಟಿ.ಎಮ್.
   f) ಶ್ರೀ ಸುಧೀರ್ ಮತ್ತು ಶ್ರೀಮತಿ ಲತಾ, ಕೊಪ್ಪ
      i) ಮಾ| ಸನತ್   ii) ಮಾ| ಸಚಿತ್
2. ಶ್ರೀಮತಿ ಮನೋರಮ ಹೆಬ್ಬಾರ್ (ದಿ| ಭುವನೇಶ ಹೆಬ್ಬಾರ್, ಮಟ್ಟು, ಕಟಪಾಡಿ ಇವರ ಪತ್ನಿ)
   a) ಶ್ರೀ ಧರ್ಮೇಂದ್ರ ಹೆಬ್ಬಾರ್ ಮತ್ತು ಶ್ರೀಮತಿ ಭಾಗ್ಯ, ಮಟ್ಟು
      i) ಮಾ| ಲಿಖಿತ್
   b) ಶ್ರೀ ಸುನಿಲ್ ಹೆಬ್ಬಾರ್ ಮತ್ತು ಶ್ರೀಮತಿ ಶೋಭಾ, ಉಜಿರೆ
      i) ಕು| ತೃಪ್ತಿ
   c) ಶ್ರೀಮತಿ ಕವನ ಮತ್ತು ಶ್ರೀ ಕುಮಾರಸ್ವಾಮಿ ಎಸ್., ಕೋಡಿ, ಪುನರೂರು
      i) ಶ್ರೀಮತಿ ನವ್ಯ ಮತ್ತು ಶ್ರೀ ವಿಷ್ಣು ತಿಲಕ, ಪಡುಬಿದ್ರಿ
      ii) ಮಾ| ನಮನ್ ಕುಮಾರಸ್ವಾಮಿ
3. ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಶಂಕರನಾರಾಯಣ ಹೆಬ್ಬಾರ್, ಬೆಂಗಳೂರು
   a) ಶ್ರೀಮತಿ ಸುಜಯ ಮತ್ತು ಶ್ರೀ ರಂಗನಾಥ್ ಬೆಂಗಳೂರು
      i) ಕು| ಸಾನ್ವಿ
4. ಶ್ರೀಮತಿ ಲಲಿತಾಂಬ ಮತ್ತು ಶ್ರೀ ಯೋಗಾನಂದ ಶಾಸ್ತ್ರಿ, ಪಡುಬಿದ್ರಿ
   a) ಶ್ರೀ ಅಭಿಜಿನ್ ಶಾಸ್ತ್ರಿ ಮತ್ತು ಶ್ರೀಮತಿ ರಶ್ಮಿ, ಬೆಂಗಳೂರು
      i) ಕು| ಮಿಹಾಲಿ ಶಾಸ್ತ್ರಿ

## ಕುಟುಂಬಸ್ಥರು ಬಂಧು ಬಾಂಧವರು ಮತ್ತು ಅಪಾರ ಹಿತೈಷಿಗಳು



ಚಿ| ಕೆ. ಯಜ್ಞೇಶ್ ಕುಮಾರ್ ಮತ್ತು ಚಿ| ಸೌ| ಶ್ರದ್ಧಾ

ನೂತನ ದಂಪತಿಗಳಿಗೆ ಶುಭಕೋರುವ :

ಶ್ರೀ ಕಳಮೆ ಗಿರೀಶ್ ಕುಮಾರ್ ಮತ್ತು
ಶ್ರೀಮತಿ ಮಾಲಿನಿ

ಹಾಗೂ

ಶ್ರೀ ಎಲ್ಲೂರು ಶರದ್ ಶ್ಯಾನ್‌ಭೋಗ್
ಮತ್ತು ಶ್ರೀಮತಿ ಹೇಮಪ್ರಭಾ



ಕಾಶ್ಮೀರ ಕಣಿವೆಯ ಪಹಲ್‌ಗಾಮ್ ನಲ್ಲಿ ನಮ್ಮ ಸಮಾಜದ ಪ್ರವಾಸಿಗರ ತಂಡ ಕಾಶ್ಮೀರಿ ಉಡುಗೆಯಲ್ಲಿ. ಎಡದಿಂದ ಬಲಕ್ಕೆ : ಶ್ರೀ ಮಂಜುನಾಥ ಹೆಬ್ಬಾರ್, ವಿಕ್ರಮರಾವ್, ಕು| ವೈಷ್ಣವಿ ಹೆಬ್ಬಾರ್, ಶ್ರೀಮತಿ ಪೂರ್ಣಿಮಾ ಪ್ರಫುಲ್ಲಚಂದ್ರ, ಶ್ರೀಮತಿ ರಜನಿ ಹೆಬ್ಬಾರ್, ಯಶೋದಾ ಕೋಲ್ಪೆ, ಶಾಂಭವಿ ಜಯರಾಮ ರಾವ್, ಸಕ್ಕಟ್ಟು ಜಯರಾಮ ರಾವ್ ಹಾಗೂ ಶ್ರೀ ಜಿ.ಕೆ ಕೋಲ್ಪೆ, ಉಡುಪಿ.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**“ಗೃಹ ಸಾಲ”**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



**With Best Compliments From :**

## ***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com



**With Best Compliments From :**

Land™ Trades
BUILDERS & DEVELOPERS

UPGRADE TO A NEW LIFESTYLE
Premium Projects in Mangalore




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
Real Estate Developer Rating CRISIL DA3+ CREDAI


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org